ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋ : 114

ನೇ ವರ್ಷ 47ನೇ ಸಂಚಿಕೆ ಕೊಪ್ಪ 29-7-1990 ಭಾನುವಾರ ಬೆಲೆ 1-20 ಪೈಸೆ

ಕೊಪ್ಪದಲ್ಲಿ ಕಳವಿನ ಸರಮಾಲೆ

ಕೊಪ್ಪ: ಇಲ್ಲಿ ಕಳೆದ 1 ತಿಂಗಳಿಂದೀಚೆಗೆ ಮನೆಗೆ ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿರುವ ಹಲವಾರು ಪ್ರಕರಣಗಳು ನಡೆದು, ನಾಗರಿಕರು ಕಂಗಾಲಾಗಿದ್ದಾರೆ.

ಇಂದಿರಾ ನಗರದ ಬಳಿ ಕರ್ನಾಟಕ ಬ್ಯಾಂಕ್ ಉದ್ಯೋಗಿ ದಯಾನಂದ ಅವರ ಮನೆಗೆ ಜು. 21ರ ರಾತ್ರಿ ಹೆಂಚು ತೆಗೆದು ನುಗ್ಗಿದ ಕಳ್ಳರು ಸ್ಟೀರಿಯೊ ಸಹಿತ ಟೇಪ್ ರೆಕಾರ್ಡರ್ ಮತ್ತು 28 ಕ್ಯಾಸೆಟ್‌ಗಳು ಹಾಗೂ ವಿಪುಲವಾಗಿ ಬಟ್ಟೆ-ಸೀರೆ ಮುಂತಾಗಿ ಒಟ್ಟು ಸುಮಾರು 10 ಸಾವಿರ ರೂ. ಗೂ ಹೆಚ್ಚು ಬೆಲೆಯ ವಸ್ತುಗಳನ್ನು ಅಪಹರಿಸಿದ್ದಾರೆ.

ಅದಕ್ಕೆ ಒಂದೆರಡು ದಿನ ಮೊದಲು ಅಲ್ಲೇ ಸಮೀಪ ಕಾಳಿದಾಸ ರಸ್ತೆಯ ಗಣೇಶ್ ಎಂಬ ಅಧ್ಯಾಪಕರ ಮನೆಯಲ್ಲೂ ಹೆಂಚು ತೆಗೆದು ಕಳ್ಳತನ ಎಸಗುವ ವಿಫಲ ಯತ್ನ ನಡೆದಿದೆ

ಇದಕ್ಕೆ ಮೊದಲು ಮಸೀದಿಯ ಗುರುಗಳ ಮನೆಯಲ್ಲಿ ಸುಮಾರು 2000 ರೂ. ಬೆಲೆಯ ಬಟ್ಟೆ-ಬರೆ ಮತ್ತು ಇತರ ವಸ್ತುಗಳು ಕಳುವಾಗಿದ್ದವು. 2 ವಾರದ ಹಿಂದೆ ಕಿರಿಯ ಕಾಲೇಜು ನಿವೃತ್ತ ಪ್ರಿನ್ಸಿಪಾಲರ ಮನೆಯ ಬೀಗ ಮುರಿದು ಟೇಬಲ್ ಫ್ಯಾನ್ ಕಳವು ಮಾಡಿದ್ದಾರೆ.

ಕೊಪ್ಪದ ಹೊರ ವಲಯಗಳ ವಸತಿ ಪ್ರದೇಶಗಳಲ್ಲೂ ಕಳ್ಳತನ ಹೆಚ್ಚಿರುವುದಾಗಿ ಹೇಳಲಾಗುತ್ತಿದೆ

ಪೋಲೀಸರ ಮನವಿ

ನಾಗರಿಕರು ಮನೆಯಲ್ಲಿ ಯಾರೂ ಇಲ್ಲದಂತೆ ಖಾಲಿ ಬಿಟ್ಟು ಬೀಗ ಹಾಕಿಕೊಂಡು ಹೋಗದೆ, ಯಾರಾದರೂ ಉಳಿಯಲು ಏರ್ಪಾಡು ಮಾಡಿಕೊಳ್ಳಬೇಕೆಂದು ಪೋಲೀಸರು ವಿನಂತಿಸಿದ್ದಾರೆ.

ಗಂಡ-ಅತ್ತೆ-ಮಾವಂದಿರ ಕಿರುಕುಳ ಸಹಿಸಲಾಗದೆ ನವ ವಿವಾಹಿತೆ ಆತ್ಮಹತ್ಯೆ

ಸಮಾಜದ ಕ್ರೌರ್ಯಕ್ಕೆ ಮತ್ತೊಂದು ಬಲಿ

ಕೊಪ್ಪ : ಕೇವಲ 8 ತಿಂಗಳ ಹಿಂದೆ ಮದುವೆಯಾಗಿದ್ದ ಗುಣವಂತೆ ರಸ್ತೆಯ ಮೈಮುನಾ ಎಂಬ 18ರ ತರುಣಿ ...ತ್ತೆ-ಮಾವಂದಿರ ಹಿಂಸೆ ತಾಳಲಾರದೆ ಜು. 18ರ ಸಂಜೆ ಎಲ್ಲರೆದುರಿಗೇ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾಳೆ.

ಈಕೆಯನ್ನು 'ಪ್ರೀತಿಸಿ' ರಿಜಿಸ್ಟರ್ ...ದುವೆಯಾಗಿದ್ದ ಜಬ್ಬಾರ್ ಕೂಡ ತನ್ನ ...ಾಯಿ ಜೈನಾಬಿ ಮತ್ತು ತಂದೆ ಮಹಮ...ಾಲಿ ಜೊತೆ ಈಕೆಗೆ ಕಿರುಕುಳ ಕೊಡುವುದ...ಲ್ಲಿ ಸೇರಿಕೊಂಡಿದ್ದಲ್ಲದೆ, 4 ತಿಂಗಳ ಹಿಂದೆ ...ಕೆಗೆ ಬಲವಂತವಾಗಿ ಗರ್ಭಪಾತವನ್ನೂ ...ಮಾಡಿಸಿದ್ದರೆನ್ನಲಾಗಿದೆ.

ಮೃತಳ ಅಣ್ಣ ಶೇಖ್ ಅಹಮದ್ ನೀಡಿದ ದೂರಿನ ಮೇಲೆ ಸಬ್ ಇನ್ಸ್‌ಪೆಕ್ಟರ್ ದುಗ್ಗಪ್ಪ ಮೂವರನ್ನೂ ಬಂಧಿಸಿದ್ದು, ತಾ॥ ದಂಡಾಧಿಕಾರಿ ಜಿ.ಎಸ್. ನಾಯಕ್ ತನಿಖೆ ನಡೆಸುತ್ತಿದ್ದಾರೆ ಆರೋಪಿಗಳಿಗೆ ಜಾಮೀನು ನಿರಾಕರಿಸಿ ನ್ಯಾಯಾಂಗ ಬಂಧನದಲ್ಲಿಡಲಾಗಿದೆ.

ತಮ್ಮ ಇಷ್ಟಕ್ಕೆ ವಿರುದ್ಧ ಮದುವೆಯಾದುದು ಹಾಗೂ ಇನ್ನೊಬ್ಬ ಸೊಸೆಯಂತೆ ವರದಕ್ಷಿಣೆ ತಾರದಿದ್ದುದು ಈಕೆಯ ಮೇಲಿನ ಹಿಂಸಾಚಾರಕ್ಕೆ ಕಾರಣವೆನ್ನಲಾಗುತ್ತಿದೆ. ಕಳೆದ ತಿಂಗಳಷ್ಟೇ ಉತ್ತಮೇಶ್ವರದ ಎಳೆಯ ಗೃಹಿಣಿಯೊಬ್ಬರು ಇಬ್ಬರು ಪುಟ್ಟ ಮಕ್ಕಳೊಡನೆ ಹೊಳೆಗೆ ಬಿದ್ದು ಮೃತಪಟ್ಟ ಪ್ರಕರಣದ ಬೆನ್ನಿಗೇ ನಡೆದಿರುವ ಈ ದುರಂತ ಕೊಪ್ಪದ ಸುತ್ತಮುತ್ತ ತಲ್ಲಣ ಮೂಡಿಸಿದೆ.

...ಗ್ಗ ದೇವಸ್ಥಾನದ ಹಗರಣ: ರಾಜಿ ಪಂಚಾಯ್ತಿ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸಮೀಪದ ಕಿಗ್ಗ ದೇವಸ್ಥಾನ...ವರು ಗ್ರಾಮ ಠಾಣಕ್ಕೆ ಬೇಲಿ ಹಾಕಿದ್ದು, ...ಂಡಲದದರು ಕೀಳಿಸಿದ್ದು—ಈ ಹಗರಣ...ಲ್ಲಿ ರಾಮಪ್ಪಯ್ಯ ಮತ್ತು ಕೆ. ಆರ್. ...ಣ್ಣಯ್ಯ ಹೆಗ್ಡೆಯವರ ಮಧ್ಯಸ್ಥಿಕೆಯಲ್ಲಿ ... 27ರಂದು ಸಂಧಾನ ನಡೆದು, ಎರಡೂ ...ತ ಪ್ರಕರಣಗಳನ್ನು ಹಿಂತೆಗೆದುಕೊಳ್ಳಲು ...ಪ್ಪಲಾಗಿದೆ.

ಈ ಮಧ್ಯೆ, ಶೃಂಗೇಶ್ವರ ರಾವ್ ಅವರ ...ಧನಕ್ಕೆ ದೇವಸ್ಥಾನದ ಸಮಿತಿ ಕಾರಣ...ದುದನ್ನು ಪ್ರತಿಭಟಿಸಿ, ಪಶ್ಚಿಮವಾಹಿನಿ ... ರಾಮಯ್ಯ, ಮಗೇಬೈಲು ಮಹಾ...ಯ್ಯ ಮತ್ತು ಶೇಷಗಿರಿಯಪ್ಪ ಸಮಿತಿಗೆ ...ಜೀನಾಮೆ ನೀಡಿದ್ದಾರೆಂದು ವರದಿ...ಾಗಿದೆ.

ಸಂಗಮೇಶ್ವರಪೇಟೆಯ ರೌಡಿ ವಿಲಿಯಂ, ಹೇರೂರು ಹಂಸ ಬಂಧನ :

ಗಂಧ ಕಳ್ಳ ಸಾಗಣೆಯ ಹಲವು ಪ್ರಕರಣಗಳ ಪತ್ತೆ

ಕೊಪ್ಪ : ಇಲ್ಲಿನ ಅರಣ್ಯ ವಲಯ ಮತ್ತು ಸ್ಕ್ವಾಡ್ ಸಿಬ್ಬಂದಿ ಕಳೆದೊಂದು ವಾರದಲ್ಲಿ ಗಂಧ ಸಾಗಣೆಯ ಮತ್ತಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಹಲವು ತಂಡಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜು. 17ರ ಬೆಳಿಗ್ಗೆ ಜಯಪುರ ಸುತ್ತಮುತ್ತಲಿನ ಹಳೆಯ ಕುಖ್ಯಾತ ತಂಡದ 'ನಾಯಕ'ನಾದ ಹೇರೂರಿನ ಹಂಸ ಮತ್ತು ಸಹಚರರಾದ ಜಯಪುರದ ಹುಸೇನ್, ಅಗಳಮನೆ ಸುನಿಲ್ ಹಾಗೂ ಸಣ್ಣಕೌಳಿಯ ರಾಮ, ತಿಮ್ಮ, ಜಯಪುರದ ಮುನಿಯಪ್ಪ ಇವರುಗಳನ್ನು ಸ್ಕ್ವಾಡ್ ರೇಂಜರ್ ನಾಯಕ್ ಮತ್ತು ಸಿಬ್ಬಂದಿ ವಲಯ ಸಿಬ್ಬಂದಿಯೊಂದಿಗೆ ಸೇರಿಕೊಂಡು ಬಂಧಿಸಿ, ಸುಮಾರು 40 ಸಾವಿರ ರೂ. ಬೆಲೆಯ 400 ಕಿಲೊ ಗಂಧವನ್ನು ವಶಪಡಿಸಿಕೊಂಡಿದ್ದಾರೆ. ಕಿಟ್ಟ ಎಂಬವನು ತಪ್ಪಿಸಿಕೊಂಡಿದ್ದಾನೆ. ನೂತನ ವಲಯ ಅರಣ್ಯಾಧಿಕಾರಿ ನರಸಿಂಹಯ್ಯ ಮುಂದಿನ ಕ್ರಮ ಜರುಗಿಸಿದ್ದಾರೆ.

ಜು. 14 ರಂದು ಸೂರ್ಯದೇವಸ್ಥಾನದ ಕುಖ್ಯಾತ ತಂಡವಾದ ಅಣ್ಣಯ್ಯ ಮತ್ತು ಸುಬ್ರಮಣ್ಯ ಇವರುಗಳನ್ನು ಬಂಧಿಸಿ 20 ಸಾವಿರ ರೂ. ಬೆಲೆಯ 200 ಕಿಲೊ ಗಂಧ ವಶಪಡಿಸಿಕೊಳ್ಳಲಾಗಿದೆ. ರವಿ ಎಂಬ ಪ್ರಮುಖ ಆರೋಪಿ ಹಾಗೂ ಶಿವಪುರದ ಕೃಷ್ಣ ಮೂರ್ತಿ ಯಾನೆ ಕಿಟ್ಟ ಎಂಬ ಸಂಶಯಿತ ತಲೆಮರೆಸಿಕೊಂಡಿದ್ದಾರೆ.

ಜು. 24ರ ರಾತ್ರಿ ಹೊನ್ನಾಳಿಯಿಂದ ಮಂಗಳೂರಿಗೆ ಹೋಗುವ ನವದುರ್ಗ ಬಸ್ಸಿನಲ್ಲಿ ಕೇರಳದ ಕುಮಾರನ್ ಮತ್ತು ಮಣಿ ತಾವು ಹಾಕಿಕೊಂಡಿದ್ದ ಜರ್ಕಿನ್ ಒಳಗಿಟ್ಟುಕೊಂಡು ಸಾಗಿಸುತ್ತಿದ್ದ 10 ಕಿಲೊ ಗಂಧವನ್ನು ಸಾರ್ವಜನಿಕರ ನೆರವಿನಿಂದ ಅದೇ ಬಸ್‌ನಲ್ಲಿದ್ದ ಫಾರೆಸ್ಟರ್ ಸುಂಕಪ್ಪ ವಶಪಡಿಸಿಕೊಂಡು ಅಪರಾಧಿಗಳನ್ನು ಬಂಧಿಸಿದ್ದಾರೆ.

ಮಿನಿ ವೀರಪ್ಪನ್

ಇವೆಲ್ಲಕ್ಕಿಂತ ರುದ್ರ ಸಾಹಸ ಮಾಡಿ ಬಂಧಿಸಿರುವುದು ಉಗ್ರ ರೌಡಿ ಮತ್ತು ಸ್ವಂತ ಲಾರಿಯಲ್ಲಿ ಗಂಧ ಸಾಗಣೆ ಮಾಡುವ ಸಂಗಮೇಶ್ವರ ಪೇಟೆ ಬಳಿಯ ನಿಡುವಾಳೆಯ ವಿಲಿಯಂನನ್ನು. ಜು. 27ರಂದು ಸ್ಕ್ವಾಡ್ ಸಿಬ್ಬಂದಿ ಈತನನ್ನು ಲಾರಿ ಹಾಗೂ ಸಹಚರರ ಸಮೇತ ತಡೆದು ನಿಲ್ಲಿಸಿ ಬಂಧಿಸಲು ಯತ್ನಿಸಿದಾಗ ಸಿಬ್ಬಂದಿಯ ಕೈಯಿಂದ ಬಂದೂಕು ಕಸಿದುಕೊಂಡು ಅವರ ಮೇಲೇ ಗುಂಡುಹಾರಿಸಲೆತ್ನಿಸಿದನೆಂದು ತಿಳಿದು ಬಂದಿದೆ. ಬಂದೂಕು ಖಾಲಿಯಿದ್ದುದರಿಂದ ಪ್ರಾಣಾಪಾಯವಾಗಲಿಲ್ಲ. ಈತನ ಬಗ್ಗೆ ಬಣಕಲ್ ಪೋಲೀಸರಿಗೆ ತಿಳಿಸಿದರೂ ಅವರು ಏನೂ ಕ್ರಮ ಕೈಗೊಳ್ಳಲು ಉತ್ಸಾಹ ತೋರಿಸಲಿಲ್ಲವೆಂದು ತಿಳಿದು ಬಂದಿದೆ. (ಬಹುಶಃ ಅವರು ಇಲ್ಲೊಬ್ಬ ಭಾವೀ ವೀರಪ್ಪನ್‌ನನ್ನು ಸೃಷ್ಟಿಸುತ್ತಿರಬಹುದು.)

ಅನಂತರ ಕೈ ಕೋಳ ತೊಡಿಸಿದಾಗ ಅದನ್ನೇ ಜಗ್ಗಿ ಮುರಿದ ಈತ ತಪ್ಪಿಸಿಕೊಳ್ಳುವುದನ್ನು ತಡೆಯಲು ಸಿಬ್ಬಂದಿ ಲಾರಿಯನ್ನೂ ವಶಪಡಿಸಿಕೊಳ್ಳಲೆತ್ನಿಸಿದಾಗ ಸಹಚರರು ಲಾರಿಯೊಂದಿಗೆ ಪರಾರಿಯಾಗಿ ಈತ ಒಬ್ಬಂಟಿಯಾದರೂ ಜಗ್ಗದೆ ಸಿಬ್ಬಂದಿಯ ಮೇಲೆರಗಿ ಹಲವರನ್ನು ತೀವ್ರವಾಗಿ ಗಾಯಗೊಳಿಸಿದನೆನ್ನಲಾಗಿದೆ.

ಕೊಬ್ಬಿದ ಕಾಡು ಕೋಣದಂತೆ ಸೆಣಸುತ್ತಿದ್ದ ಅವನನ್ನು ಹೇಗೋ ಮಣಿಸಿ, ತಂತಿಗಳಿಂದ ಬಿಗಿದು ಕ[illegible] ತರಲಾಗಿದೆ.

...ಶಂಕೆಯಿಂದ ಸಿಕ್ಕಿಬಿದ್ದವರು ಗಂಧ ಕಳ್ಳರು

ಕೊಪ್ಪ: ಜು. 13ರಂದು ಇಲ್ಲಿನ ಪೋ...ಸರು ಸಂಶಯದ ಮೇಲೆ ಬಂಧಿಸಿದ್ದ ರವಿ ...ತ್ತು ಇಬ್ರಾಹಿಂ ಎಂಬ ಇಬ್ಬರೂ ...ೃತ್ತಿ ನಿರತ" ಗಂಧ ಸಾಗಣೆ ತಂಡದವ...ದು ಬಯಲಾಗಿದೆ. ಜು. 14ರಂದು ...ೋಲೀಸರು ಸಂತೆ ಬಳಿ ವಶಪಡಿಸಿಕೊಂಡಿದ್ದ ...ಳ್ಳಿಯ ಮಿನಿ ಲಾರಿಯನ್ನು ಇವರೇ ...ಧ ಸಾಗಣೆಗಾಗಿ ಕದ್ದು ತಂದಿದ್ದು, ಮೇ...ೈಲು ಬಳಿ ಸಿದ್ಧಪಡಿಸಿಟ್ಟಿದ್ದ ಗಂಧ ಅರ...ಇಲಾಖೆಯವರಿಗೆ ಸಿಕ್ಕಿಬಿದ್ದುದರಿಂದ, ...ಂಡ ಬೇರೆ ಸಂಗ್ರಹಣೆಯ ಯತ್ನದಲ್ಲಿ...ಗ ಇವರಿಬ್ಬರು ಸುಬ್ರಮಣ್ಯ ಮತ್ತು ...ವಿಂದರಾಜ್ ಎಂಬ ಉತ್ಸಾಹಿ ಪೋ...ಸರ ಕೈಗೆ ಸಿಕ್ಕಿಬಿದ್ದರು.

ಕೊಪ್ಪ ಮತ್ತು ಸುತ್ತಮುತ್ತಲ ಹಲವರೂ ಸೇರಿದಂತೆ ಈ ತಂಡದ ಇನ್ನೂ 8-10 ಜನ ತಪ್ಪಿಸಿಕೊಂಡಿದ್ದಾರೆ. 5 ತಿಂಗಳ ಹಿಂದೆ ಕೊಪ್ಪದ ನಾರಾಯಣ ಪಿಳ್ಳೆಯವರ ಲಾರಿಯನ್ನು ಕದ್ದೊಯ್ದುದೂ ಇದೇ ತಂಡವಾಗಿದ್ದು, ಮೇಗೂರು ಬಳಿಯಿಂದ ಭಾರೀ ಗಂಧದ ಮರವೊಂದನ್ನು ಕದ್ದು ಸಾಗಿಸಿತ್ತು.

ಕಳೆದ ಒಂದೆರಡು ವರ್ಷಗಳಿಂದಲೂ ಈ ತಂಡ ಸುರತ್ಕಲ್, ಬಜ್ಪೆ ಮುಂತಾಗಿ ಹಲವಾರು ಕಡೆಗಳಿಂದ ಲಾರಿಗಳನ್ನು ಕದ್ದು ತಂದು, ನ. ರಾ. ಪುರ, ಬಾಳೆಹೊನ್ನೂರು, ಮೇಲ್ಪಾಲು, ಮಾಗುಂಡಿ, ಕಳಸ ಮುಂತಾದೆಡೆಗಳಿಂದ ಗಂಧ ಒಯ್ದು, ಕೇರಳ ಗಡಿಯ ಮಂಜೇಶ್ವರದಲ್ಲಿರುವ ಗಂಧದೆಣ್ಣೆ ಕಾರ್ಖಾನೆಗೆ ಒದಗಿಸುತ್ತಿತ್ತೆಂದು ಈಗ ಸೆರೆ ಸಿಕ್ಕಿರುವ ಕಳ್ಳರು ಪೋಲೀಸರಿಗೆ ತಿಳಿಸಿದ್ದಾರೆ.

ಸರ್ಕಲ್ ಇನ್‌ಸ್ಪೆಕ್ಟರ್ ಎಸ್. ಎಫ್. ಪಾಶಾ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ತಾಮ್ರದ ತಂತಿ ಕಳ್ಳನ ಬಂಧನ

ನ.ರಾ. ಪುರದಲ್ಲಿ ತಾಮ್ರದ ತಂತಿ ಕದಿಯುತ್ತಿದ್ದ ಮಲ್ಲಿಕಾರ್ಜುನ ಎಂಬ ಕಳ್ಳನನ್ನು ಸರ್ಕಲ್ ಇನ್‌ಸ್ಪೆಕ್ಟರು ಜು. 24 ರಂದು ಬಂಧಿಸಿದ್ದಾರೆ.

ವೇದಿಕೆ

ಪರಿಸರದ ಉಳಿವು ಎಲ್ಲರಿಗಾಗಿ

ಪ್ರಿಯರೆ,

ಯಾವುದೇ ಪತ್ರಿಕೆ ಪರಿಸರದ ಬಗ್ಗೆ ಕಾಳಜಿ ವಹಿಸುವುದು ಅತ್ಯಂತ ಅಗತ್ಯ ಹಾಗೂ ಮಹತ್ವ ಕೂಡ. ಪರಿಸರದ ಬಗೆಗಿನ ಅನೇಕ ವಿಚಾರಗಳು ಜನರನ್ನು ತಲುಪಲು ಪತ್ರಿಕೆಗಳು ಉತ್ತಮ ವಾಹಕಗಳು. ಈ ನಿಟ್ಟಿನಲ್ಲಿ 'ಮುಂಜಾವು' ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎನ್ನಲು ಅಡ್ಡಿಯಿಲ್ಲ.

ಪರಿಸರದ ಉಳಿವು ಎಲ್ಲರಿಗಾಗಿ. ಪರಿಸರದಿಂದಾಗುವ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಯೋಜನಗಳು ಬಡವ-ಬಲ್ಲಿದ, ಸ್ತ್ರೀ-ಪುರುಷ ಹಾಗೂ ಜಾತಿ-ಮತಗಳ ಭೇದವಿಲ್ಲದೇ ಎಲ್ಲರೂ ಪಡೆಯುವಂಥವು. ಈಗಿರುವ ಜಲ ಮಾಲಿನ್ಯ, ವಾಯು ಮಾಲಿನ್ಯ ಹಾಗೂ ಮನುಷ್ಯನ ಮನಸ್ಸಿನ ಮಾಲಿನ್ಯ (ನೆಮ್ಮದಿ, ಶಾಂತಿ ಇಲ್ಲದಿರುವಿಕೆ) ಇವುಗಳನ್ನು ಸ್ವಚ್ಛ ಹಾಗೂ ಸುಂದರ ಪರಿಸರದಿಂದ ತಡೆಯಲು ಸಾಧ್ಯ.

ಒಂಬತ್ತು ತಿಂಗಳು ಹೊತ್ತು, ಹೆತ್ತು ಸಲಹಿದ ತಾಯಿಯು ಅನಾರೋಗ್ಯದಿಂದ ನರಳುತ್ತಿದ್ದರೆ ಅವಳ ಶುಶ್ರೂಷೆಗೆ ಮಕ್ಕಳು ಪ್ರಾಮಾಣಿಕವಾಗಿ ವಹಿಸುವ ಕಾಳಜಿಯನ್ನೇ ಇಂದು ಪ್ರತಿಯೊಬ್ಬರೂ ಕೂಡ ಪರಿಸರದ ಬಗ್ಗೆ ವಹಿಸಬೇಕಿದೆ.

—ಕೆ.ಎಸ್. ರಾಜೇಂದ್ರ, ಬಿಂತ್ರವಳ್ಳಿ.

ಕೊಬ್ಬಿದ ರಕ್ಕಸರು ಪರಿಸರ ವಿನಾಶಗೈದರೆ ಬಡಬಗ್ಗರು ಪ್ರಾಣ-ಆರೋಗ್ಯ-ಆಸ್ತಿ ಕಳಕೊಂಬರು !

ಪರಿಸರ ರಕ್ಷಣೆ ಯಾರಿಗಾಗಿ? ಎಂದು ನಿಮ್ಮ 1-7-1990ರ ಸಂಚಿಕೆಯಲ್ಲಿ ಪ್ರಶ್ನಿಸಿರುವ ಕೃಷ್ಣ ಭಂಡಾರಿಯವರ ನಿಲುವು ಕೇವಲ ತರ್ಕಬದ್ಧವಾಗಿದೆ. ಆದರೆ ಅವರು ಸತ್ಯದ ಹುಡುಕಾಟದಲ್ಲಿ ದಾರಿ ತಪ್ಪಿಸುವ ಪ್ರಯತ್ನ ಮಾಡಿದ್ದಾರೆ; ಅಥವಾ ಸ್ವತಃ ದಾರಿ ತಪ್ಪಿದ್ದಾರೆನ್ನಿಸುತ್ತದೆ. ಏಕೆಂದರೆ, "ಪರಿಸರದ ಉಳಿವು ಶೋಷಕರಿಗೆ ಶೋಷಣೆಯ ಸಾಧನ ಮಾತ್ರವೇ ಆಗಿದೆ, ಪರಿಸರನಾಶ ಬಡ ರೈತರ, ಕೃಷಿ ಕಾರ್ಮಿಕರ, ಶ್ರಮಿಕರ ಬದುಕಿನಲ್ಲಿ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ" ಎನ್ನುವ ಅವರ ನಿಲುವು ತಳಪಾಯವಿಲ್ಲದ್ದು.

ಪರಿಸರ ನಾಶದಿಂದ ಯಾರ ಅಭಿವೃದ್ಧಿಯಾಗುತ್ತಿದೆ, ಯಾರ ಬದುಕು ಅಸಹನೀಯವಾಗುತ್ತಿದೆಯೆಂಬುದನ್ನು ಗಮನಿಸಬೇಕು. ಸಹಸ್ರಾರು ಎಕರೆ ಜಮೀನು-ಅರಣ್ಯ ಮುಳುಗಿಸಿ ನೀರು ಶೇಖರಿಸಿ ವಿದ್ಯುತ್ ಉತ್ಪಾದಿಸಿದರೆನ್ನಿ. ಬಹು ಪಾಲು ವಿದ್ಯುತ್ ಖಾಸಗಿ ಕೈಗಾರಿಕೋದ್ಯಮಿಗಳ, ವಿದ್ಯುತ್ ಕಳ್ಳರ, ನಗರ ವಾಸಿಗಳ ಪಾಲಾಗುತ್ತದೆ. ಆಸ್ತಿ-ಮನೆ ಕಳೆದುಕೊಂಡವರಿಗೆ ಅಷ್ಟಿಷ್ಟು ಪರಿಹಾರ ಸಿಗಬಹುದು. ಆದರೆ ಗುಡ್ಡಗಾಡು ಪ್ರದೇಶಗಳಲ್ಲಿ ಕೂಲಿನಾಲಿ ಮಾಡಿಯೋ, ಗೆಡ್ಡೆ ಗೆಣಸು ತಿಂದೋ ಹೇಗೋ ಬದುಕುತ್ತಿರುವ ಬಡವರಿಗೆ ಯಾವ ಪರಿಹಾರ? ಈ ಜನ ಕಾಡಲ್ಲಿ ತಾವಿಲ್ಲದೆ, ಹಳ್ಳಿಯಲ್ಲಿ ಜೀವನೋಪಾಯವಿಲ್ಲದೆ, ನಗರವಾಸಿಗಳಾಗಿ ಬೀದಿ ನಾಯಿಗಳ ಪಾಡು ಪಡಬೇಕು. ಅಥವಾ ಅದೇ ಖಾಸಗಿ ಕಾರ್ಖಾನೆಗಳಲ್ಲಿ ಜೆಂಗೂಲಿ ಕಾರ್ಮಿಕರಾಗಿ ದುಡಿದು ನರಕ ಕಾಣಬೇಕು. ಅತ್ತ ಪರಿಸರ ನಾಶದಿಂದ ಪ್ರಕೃತಿ ವಿಕೋಪ ; ಇತ್ತ ಸ್ವಾತಂತ್ರ್ಯವನ್ನೂ ಕಳೆದುಕೊಂಡ ಅತಂತ್ರ ಸ್ಥಿತಿ. ಜಲ ವಿದ್ಯುತ್ ಯೋಜನೆಯದು ಮಾತ್ರವಲ್ಲ, ಯಾವುದೇ ಬೃಹತ್ ಯೋಜನೆಯ ಪರಿಣಾಮವೂ ಅಂತಿಮವಾಗಿ ಇದೇ ತಾನೆ?

ಲೇಖಕರೆನ್ನುವಂತೆ 'ಸೀಮಿತ ಪರಿಸರ ನಾಶ'ದ ಬಗೆಗೆ ಯಾರೂ ಚಕಾರವೆತ್ತುತ್ತಿರಲಿಲ್ಲ. ಇಂದು ಆಗುತ್ತಿರುವ ಅಗಾಧ ಪ್ರಮಾಣದ ಪರಿಸರ ನಾಶವನ್ನು ತಡೆದುಕೊಳ್ಳುವ ಚೈತನ್ಯ ಈ ಪ್ರಕೃತಿಗಿಲ್ಲ. ಇಂದು ಬಡವರು, ಅಸಹಾಯಕರು ದಿನನಿತ್ಯ ಅನುಭವಿಸುತ್ತಿರುವ ಚಿತ್ರ-ವಿಚಿತ್ರ ಖಾಯಿಲೆಗಳಿಗೆ, ಚಿತ್ರ ವಿಚಿತ್ರ ಸಮಸ್ಯೆಗಳಿಗೆ ಕೂಡ ಈ ಅಗಾಧ ಪ್ರಮಾಣದ ಪರಿಸರ ನಾಶವೂ ಒಂದು ಬಹು ಮುಖ್ಯ ಕಾರಣ ಎನ್ನುವ ಸಂಗತಿಯೇನು ಗುಟ್ಟಾಗಿ ಉಳಿದಿಲ್ಲ.

ಈ ಜಗತ್ತಿನ ಪರಿಸರ ನಾನಾ ವಿಧದಲ್ಲಿ ಮರಳಿಸಲಾರದಂತೆ ನಾಶವಾಗುತ್ತಿರುವುದನ್ನು ನಮ್ಮ ಕಣ್ಣೆದುರೇ ಕಾಣುತ್ತಿದ್ದೇವೆ. ಮನುಷ್ಯನ ಮಿತಿಯಿಲ್ಲದ ತೆವಲಿಗೆ, ದುರಾಸೆಗೆ ಸಿಕ್ಕಿ, ಎಷ್ಟೋ ಪ್ರಾಣಿ-ಪಕ್ಷಿ ಸಂಕುಲಗಳೇ ಈ ಭೂಮಿಯಿಂದ ಶಾಶ್ವತವಾಗಿ ನಾಶವಾಗಿವೆ; ಇದರ ಪರಿಣಾಮವಾಗಿ, ಅವುಗಳನ್ನೇ ಅವಲಂಬಿಸಿದ್ದ ಎಷ್ಟೋ ವೃಕ್ಷ ಸಂತತಿಗಳೂ ಅಳಿದು ಹೋಗಿವೆ ಅಥವಾ ವೃಕ್ಷ ಸಂತತಿ ನಾಶವಾಗಿ, ಅವುಗಳನ್ನವಲಂಬಿಸಿದ್ದ ಪಶು-ಪಕ್ಷಿ ಸಂತತಿಗಳೂ ನಾಶವಾದದ್ದಿದೆ. ಕಾಡು ಹೋಗಿ ನಾಡು ಮರುಳುಗಾಡಾಗಿದೆ. ಕಾಡು ನಾಶ, ದಿಕ್ಕು ದೆಸೆಯಿಲ್ಲದ-ಪರಿಸರದ ಎಗ್ಗಿಲ್ಲದ ಕೈಗಾರಿಕಾ ಚಟುವಟಿಕೆಗಳಿಂದ ಮಳೆ ಕೊರತೆ, ಆಮ್ಲ ಮಳೆ, ಉಷ್ಣಾಂಶದ ವೈಪರೀತ್ಯವಾಗಿ ಸಮುದ್ರ ಮಟ್ಟದ ಏರಿಕೆ-ಇಷ್ಟು ಸಾಲದೆಂದು ಭೂಮಿಯ ರಕ್ಷಕ ಓಝೋನ್ ಕವಚ ಹರಿದು ವಾತಾವರಣವೇ ವಿಷಮಯವಾಗುತ್ತಿದೆ. ಹೀಗಿದ್ದೂ "ಪರಿಸರ ನಾಶವಾಗುವುದಿಲ್ಲ" ಎಂದರೆ ಏನರ್ಥ? ಇದೆಲ್ಲಕ್ಕೆ ಹೆಚ್ಚು ಬಲಿಯಾಗುತ್ತಿರುವವರು ಏನೂ ಆಸ್ತಿ-ಪಾಸ್ತಿಯಿಲ್ಲದ ಬಡವರೋ ಶ್ರೀಮಂತರೋ?

ಹಾಗೆಯೇ, ಪರಿಸರ ನಾಶಗೊಳಿಸುವ ಕಿರಾತಕರು ಮಾತ್ರ ಅದರೊಂದಿಗೆ ನಾಶ ಹೊಂದುವುದಾದರೆ ಸಮಸ್ಯೆ ಇರುತ್ತಿರಲಿಲ್ಲ. ಉದಾಹರಣೆಗೆ, ಭೋಪಾಲದಲ್ಲಿ ವಿಷಾನಿಲ ಪರಿಸರವನ್ನು ಮಲಿನಗೊಳಿಸಲು ಕಾರಣರಾದವರು ಅದರಿಂದ ಪ್ರಾಣ-ಆರೋಗ್ಯ ಕಳೆದುಕೊಂಡ ಸಾವಿರಾರು ಮಂದಿ ಬಡಜನರೆ ?

ಪರಿಸರ ರಕ್ಷಣೆ ವ್ಯಕ್ತಿಯೊಬ್ಬನ ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿಗಳಲ್ಲಿ ಒಂದು ಮುಖ ಎಂಬುದನ್ನೂ ನಾವು ಅರ್ಥ ಮಾಡಿಕೊಳ್ಳಬೇಕು.

—'ಶೃಂಗ', ಶೃಂಗೇರಿ.

ಈ ಚರ್ಚೆ ಇಲ್ಲಿಗೆ ಮುಕ್ತಾಯ

—ಸಂ.

ಪರಿಸರವೂ ಸಾಮಾಜಿಕ ಕಾಳಜಿಯೇ

ಪ್ರಿಯರೆ,

ಪರಿಸರ ರಕ್ಷಣೆಯೆಂದರೆ ಕಾಡನ್ನು ಉಳಿಸುವುದು ಮಾತ್ರ ಎಂದು ಕೃಷ್ಣ ಭಂಡಾರಿಯವರು ತಿಳಿದುಕೊಂಡಂತಿದೆ. ಪರಿಸರದ ಉಳಿವಿನಲ್ಲಿ ಕಾಡು ಬಹು ಮುಖ್ಯ ಕೊಂಡಿಯ ಪಾತ್ರ ವಹಿಸುತ್ತದಾದರೂ ನಮ್ಮ ಬದುಕಿನ ಸುತ್ತಮುತ್ತಲ ವಾತಾವರಣವೆಲ್ಲವೂ ಕೂಡಿಯೇ ಪರಿಸರವಾಗುತ್ತದೆ.

ಶುದ್ಧವಾದ ಆಮ್ಲಜನಕಕ್ಕಾಗಿ, ಮಣ್ಣಿನ ಸವಕಳಿ ಹಾಗೂ ಪ್ರವಾಹ ತಡೆಯುವಿಕೆಗಾಗಿ, ಅಂತರ್ಜಲ ವೃದ್ಧಿಗಾಗಿ—ಹೀಗೆ ಬಹು ವಿಧ ಉಪಯೋಗಕ್ಕಾಗಿ ಕಾಡುಗಳ ಉಳಿವಂತೂ ಅತ್ಯಗತ್ಯ. ಇದರ ನಾಶದಿಂದಾಗುವ ದುಷ್ಪರಿಣಾಮಗಳು ಬಡವರಿಗೇ ಭೀಕರವಾಗಿರುವುದು ಹೆಚ್ಚು.

ವಿರಾಟ್ ರೂಪ ತಳೆದು ನಿಂತಿರುವ ಅಣುಶಕ್ತಿಯ ವಿನಾಶಕಾರಿ ದುಷ್ಪರಿಣಾಮಗಳಿಂದಾಗಲಿ, ಬೃಹತ್ ಯೋಜನೆಗಳಿಗಾಗಿ ಒಕ್ಕಲೆಬ್ಬಿಸುವುದರಿಂದಾಗಲಿ, ಪ್ರವಾಹ, ಕ್ಷಾಮ-ಡಾಮರಗಳಿಂದಾಗಲಿ, ವಿಷ ಪೂರಿತ ವಾತಾವರಣದಿಂದುಂಟಾಗುವ ಕಾಯಿಲೆಗಳಿಂದಾಗಲಿ, ಕ್ರೂರ ಯಾತನೆಗಳಿಗೆ ಸಿಕ್ಕುವವರು ಬಡ ಜನರೇ; ಈ ವಿನಾಶಕರ ಶಕ್ತಿಗಳಿಂದ ಇಡುಗಂಟು ಮಾಡಿಕೊಳ್ಳುತ್ತಿರುವ ಬಂಡವಾಳಿಗರಾಗಲಿ, ರಾಜಾರಾಮಣ್ಣ-ಎಂ.ಆರ್. ಶ್ರೀನಿವಾಸನ್‌ಗಳಾಗಲಿ ಅಲ್ಲ.

ಕೊನೆಯಲ್ಲಿ, "ಅಕಸ್ಮಾತ್ ಪರಿಸರ [illegible]ದರೂ [illegible] ಹುಟ್ಟಿ ಪಡೆಯು[illegible]"ಯೆಂದು [illegible]ದ್ದಾರೆ. ಇದು ನಿಜ [illegible] ಇದಕ್ಕೆ ಎಷ್ಟು ಶತಮಾನಗಳ ಅವಧಿ ಬೇಕಾಗಬಹುದು ಎಂಬುದು ಗಮನಾರ್ಹ. ಪ್ರಕೃತಿ ಪರಿಸರ ಒಮ್ಮೆ ನಾಶವಾಗಿ, ಮತ್ತೆ ಪುನರ್ ಚೇತನ ಪಡೆಯುವುದರ ಮಧ್ಯೆ ಬದುಕಬೇಕಾಗಿರುವ ನಮಗಾಗಿ ಈ ಪರಿಸರ ಹೋರಾಟ ಅನಿವಾರ್ಯವಲ್ಲವೆ?

ಸಾಮಾಜಿಕ ಪರಿಸರದ ರಕ್ಷಣೆಯೂ ಒಂದು ಅಗತ್ಯ ಕಾರ್ಯವಾದರೂ ಅದಕ್ಕೆ ಪರಿಸರ ಹೋರಾಟವನ್ನು ಲಗತ್ತಿಸಬೇಕಾದ ಅಗತ್ಯವಿಲ್ಲ. ಸಾಮಾಜಿಕ ಪರಿಸರದ ಶುದ್ಧಿಗಾಗಿಯೂ ಹೋರಾಟಗಳು ನಡೆಯುತ್ತಲೇ ಇವೆ. ಪರಿಸರವಾದಿಗಳೇನೂ ಅವನ್ನು ಅಲ್ಲಗಳೆಯುವುದಾಗಲಿ ವಿರೋಧಿಸುವುದಾಗಲಿ ಇಲ್ಲ (ಕೂಡದು) ಇವೆರಡೂ ಸಾಮಾಜಿಕ ಕಾಳಜಿಯ ಹೋರಾಟಗಳೇ ಎಂಬುದನ್ನು ಕೃಷ್ಣ ಭಂಡಾರಿ ಮತ್ತು ಅವರಂಥವರು ಅರ್ಥ ಮಾಡಿಕೊಂಡರೆ, ಈ ಗೊಂದಲಗಳಿರುವುದಿಲ್ಲ

—ವೈ. ಗ. ಜಗದೀಶ್,
ವೈಕುಂಠಪುರ.

ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರ — ಈ ಎರಡರ ರಕ್ಷಣೆಯೂ ಜೊತೆಯಾಗಿಯೇ ಸಾಗಬೇಕು

ಪ್ರಿಯರೆ,

'ಮುಂಜಾವು' ಓದುಗರಾದ ನಮಗೆ ಈ ಪತ್ರಿಕೆ ಪರಿಸರದ ಬಗ್ಗೆ ಅತೀ ಕಾಳಜಿ ತೋರಿಸುತ್ತಿದೆ ಅನ್ನಿಸುವುದಿಲ್ಲ. ಈ ಪತ್ರಿಕೆ ಪರಿಸರ ಪ್ರಜ್ಞೆ ಬೆಳೆಸುವ ಬಗ್ಗೆ ಸಿಕ್ಕ ಅವಕಾಶ ಉಪಯೋಗಿಸಿಕೊಂಡು ಸಾಮಾನ್ಯ ಜನರಲ್ಲಿ ತಿಳುವಳಿಕೆ ಮೂಡಿಸುವ ಯತ್ನ ಮಾಡುತ್ತಿದೆ.

ಭಂಡಾರಿಯವರು ಹೇಳಿರುವಂತೆ, ಪರಿಸರ ಬಡವರಿಗೆ-ಕಾರ್ಮಿಕರಿಗೆ ಅಲ್ಲ ಎಂಬ ಅಭಿಪ್ರಾಯ ಬಹಳ ಆಶ್ಚರ್ಯ ಉಂಟು ಮಾಡುತ್ತದೆ. ವಿಪರ್ಯಾಸವೆಂದರೆ, ಪರಿಸರ ಹಾಳು ಮಾಡುವುದರಲ್ಲಿ ಅವರ ಪಾಲೂ ಸಹ ಇದೆ [ತಿಳುವಳಿಕೆ ಇಲ್ಲದೆ ಇರಬಹುದು]

ನಾಡಿನ ಜನ ಭೂಮಿಯ ದಾಹಕ್ಕೊಳಗಾಗಿ ಕಾಡಿಗೆ ನುಗ್ಗಿ ಬೇಲಿ ಹಾಕಿಕೊಂಡರೂ ಈ 'ದಾಹದ' ಭೂಮಿಯಲ್ಲಿ ಬೆಳೆದ ಬೆಳೆ ಕೂಡ ನಮ್ಮ ದೇಶದ ಪೂರ್ತಿ ಜನರಿಗೆ ಹಸಿವನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ಅಲ್ಲವೇ?

ಪರಿಸರ ಉಳಿಸಿ ಎಂಬುದು ಕೊಬ್ಬಿದ ಜನರಿಗಾಗಿ ಅಲ್ಲ, ಪರಿಸರದೊಂದಿಗೇ ಹೊಂದಿಕೊಂಡು ಬದುಕುತ್ತಿರುವ ಜನಸಾಮಾನ್ಯರಿಗೆ. ತಮಗೆ ಬೇಕಾದಂತೆ ಕೃತಕ ಪರಿಸರ ಸೃಷ್ಟಿಸಿಕೊಳ್ಳಬಲ್ಲ ಹಣವಂತರಿಗೆ ಪರಿಸರದ ಅಳಿವು-ಉಳಿವಿನ ಗೊಡವೆ ಇಲ್ಲ.

"ಅಯ್ಯನ ಮನೆಯಲ್ಲಿ ಮೂರು ಕಾಸಿಗೆ ದುಡಿಯುವ ಭಯ್ಯ"ನ ಕಾಲ ಈಗ ಹೋಗಿದೆ ಈಗ ಎಲ್ಲರಿಗೂ ಸಾಮಾನ್ಯವಾದ ತಿಳುವಳಿಕೆ ಬಂದಿದೆ.

ಸಾಲ ಮನ್ನಾದ ಬೊಬ್ಬೆ ಹೊಡೆಯುತ್ತಿರುವುದು ನೂರಾರು ಎಕರೆ ಭೂಮಿ ನುಂಗಿ ನೀರು ಕುಡಿದು ಕುಳಿತ ಮಂದಿಯಲ್ಲ. ಪ್ರತಿಯೊಬ್ಬ ರೈತನೂ ಸಾಲ ಮನ್ನಾ ಆಗಲೆನ್ನುತ್ತಿದ್ದಾನೆ. ಸರ್ಕಾರ, ಅಧಿಕಾರಿಗಳು, ಕಾರ್ಮಿಕರು, ವರ್ತಕರು ಮತ್ತು ದಲ್ಲಾಳಿಗಳು ಯಾವ ರೀತಿ ರೈತರನ್ನು ಶೋಷಣೆ ಮಾಡುತ್ತಾರೆಂಬುದನ್ನು ರೈತನಾಗಿಯೇ ತಿಳಿಯಬೇಕು. ಈ ಶೋಷಣೆಯ ಮಧ್ಯದಲ್ಲಿ ಸಾಲಮನ್ನಾದ ಕ್ಷೀಣ ಧ್ವನಿ ಎದ್ದಿರುವುದೇ ಆಶ್ಚರ್ಯದ ಮಾತು.

ಪರಿಸರ ಉಳಿದರೂ ಅಳಿದರೂ ಶೇ. 60 ಭಾಗ ಜನಸಾಮಾನ್ಯರ ಮೇಲೆ ಆಗುವ ಪರಿಣಾಮ ಒಂದೇ. ಇದರಿಂದ ಕೇವಲ ಬ[illegible]ದು ವರ್ಗದ ಏಳಿಗೆ ಆಗುತ್ತದೆ ಎಂಬುದೆ[illegible]

(4ನೇ ಪುಟಕ್ಕೆ)

ಸಾಲ ಮನ್ನಾ ಅರ್ಹ ವಿವರಣೆ

ೇಂದ್ರ ಅರ್ಥ ಸಚಿವರು 19-3-1990 ದು ಆಯವ್ಯಯ ಪತ್ರವನ್ನು ಮಂಡಿ ತ್ರಾ, ಕೃಷಿಕರು. ನೇಕಾರರು ಮತ್ತು ಶಲಕರ್ಮಿಗಳ ಸಾಲ ಮನ್ನಾ ಯೋಜನೆ ನ್ನು ಕಾರ್ಯರೂಪಕ್ಕೆ ತರುವುದಾಗಿ ೂೀಷಿಸಿದ್ದರು.

ಈಗ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತ ದ ಸರಕಾರ, ಗ್ರಾಮೀಣ ಪ್ರದೇಶದ ಷಿಕರು, ನೇಕಾರರು ಮತ್ತು ಕುಶಲ ರ್ಮಿಗಳಿಗೆ 10,000 ರೂ. ವರೆಗೆ ಸಾಲ ನ್ನಾ ಮಾಡುವ ಕಾರ್ಯಕ್ರಮದ ರೂಪು ಷೆಗಳನ್ನು ರೂಪಿಸಿ, ಪ್ರಕಟಿಸಿದೆ. ಈ ರ್ಯಕ್ರಮವನ್ನು "ಕೃಷಿ ಮತ್ತು ಗ್ರಾ ಣ ಸಾಲ ಮನ್ನಾ ಯೋಜನೆ–1990" ಂದು ಹೆಸರಿಸಲಾಗಿದೆ. ಇದು –5–1990 ರಿಂದ ಜಾರಿಗೆ ಬಂದಿದೆ.

ಯೋಜನೆಯ ಲಾಭ ಸಾರ್ವಜನಿಕ ಗದ 28 ಬ್ಯಾಂಕುಗಳು ಮತ್ತು ್ರದೇಶಿಕ ಗ್ರಾಮೀಣ ಬ್ಯಾಂಕುಗಳ . ಕೊ. ಗ್ರಾಮೀಣ ಬ್ಯಾಂಕ್‌ನಂಥ ್ಯಾಂಕುಗಳ) ಅರ್ಹ ಸಾಲಗಾರರಿಗೆ ತ್ರ ಲಭ್ಯ. ಸಹಕಾರಿ ಕ್ಷೇತ್ರದ ಬ್ಯಾಂಕು ಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಇದೇ ಬಗೆಯ ಯೋಜನೆಯನ್ನು ಪಿಸಬಹುದು.

ಈ ಯೋಜನೆಯಲ್ಲಿ ಅರ್ಹ ಸಾಲಗಾರ ್ನ ಗುರುತಿಸಬೇಕಾದರೆ ಕಾರ್ಯಕ್ರಮದ ಪು ರೇಷೆಗಳಲ್ಲಿ ಬಳಸಲಾದ ಕೆಲವು ಂದರ್ಭಿಕ ಪದ/ಪದಗುಚ್ಛಗಳನ್ನು ಷ್ಟವಾಗಿ ಅರಿತುಕೊಳ್ಳುವುದು ಅವಶ್ಯಕ.

ಅ) ಕೃಷಿ ಎಂದರೆ ತೋಟಗಾರಿಕೆ, ಂಗೋಪನೆ, ಕಾಡು ಬೆಳೆಸುವುದು, ಶುಗಾರಿಕೆ, ಕೋಳಿ ಸಾಕಣೆ, ಮೀನು ಣೆ ಮತ್ತಿತರ ತತ್ಸಂಬಂಧಿ ಚಟುವಟಿಕೆ ಸೇರುತ್ತವೆ

ುಶಲಕರ್ಮಿ ಎಂದರೆ ಗ್ರಾಮೀಣ ಅಭಿ ಗೆ ಸಂಬಂಧಿಸಿದ ಗುಡಿ ಮತ್ತು ಮೀಣ ಕೈಗಾರಿಕೆಗಳು, ಕುಶಲಕರ್ಮಿ ವಟಿಕೆಗಳು, ನೇಕಾರರು ಮತ್ತು ಮೀಣ ಕಸಬುದಾರರು.

ಸಲು ನಷ್ಟ ವರ್ಷ ಎಂದರೆ ಸಾಮಾ ುತ್ಪನ್ನದ ಶೇಕಡಾ 50 ರಷ್ಟು ಅಥವಾ ್ಕಿಂತ ಕಡಿಮೆ ಉತ್ಪನ್ನವಾಗಿದ್ದು "ಅಣೇ ಘೋಷಿತವಾದ ವರ್ಷ

ಾಲಗಾರ ಎಂದರೆ ಒಂದು ಅಥವಾ ಬ್ಯಾಂಕುಗಳಿಂದ ಕೃಷಿ ಅಥವಾ ಲಕರ್ಮಿ ಚಟುವಟಿಕೆಗಳಿಗಾಗಿ ಒಂದು ಹೆಚ್ಚು ಸಾಲಗಳನ್ನು ಪಡೆದ, ರಪೂರ್ವಕವಲ್ಲದ ಸುಸ್ತಿ ಬಾಕಿದಾರ.

್ಯಾಂಕು ಎಂದರೆ ವ್ಯಕ್ತಿಗಳಿಗೆ ಕೃಷಿ ಕುಶಲಕರ್ಮಿ ಚಟುವಟಿಕೆಗಳಿಗಾಗಿ ನೀಡುವ ಸಾರ್ವಜನಿಕ ರಂಗದ ಕುಗಳು, ಗ್ರಾಮೀಣ ಬ್ಯಾಂಕು, ಸಹಕಾರಿ ಬ್ಯಾಂಕು, ಕೇಂದ್ರ ಸಹ ಬ್ಯಾಂಕು, ಪ್ರಾಥಮಿಕ ಸಹಕಾರಿ ು, ರಾಜ್ಯ ಭೂ ಅಭಿವೃದ್ಧಿ ು ಮತ್ತು ಪ್ರಾಥಮಿಕ ಭೂ ಅಭಿ ಬ್ಯಾಂಕು.

ಅನ್ವಯವಾಗುವ ದಿನಾಂಕ ಎಂದರೆ ಅಕ್ಟೋಬರ್ 2–1989(2-10-1989) ರಂದು ಸುಸ್ತಿ ಬಾಕಿಯಾಗಿರುವ ಅಲ್ಪಾವಧಿ ಸಾಲಗಳು ಮತ್ತು ದೀರ್ಘಾವಧಿ ಸಾಲದ ಕಂತುಗಳು ಮಾತ್ರ ಮನ್ನಾ ಪಡೆಯಲು ಅರ್ಹ. ಅಂತಹ ಸುಸ್ತಿ ಬಾಕಿಯ ಮೇಲಿನ ಆ ದಿನಾಂಕದವರೆಗಿನ ಬಡ್ಡಿ ಕೂಡ ರಿಯಾಯಿತಿಗೆ ಅರ್ಹ.

ಅರ್ಹ ಸಾಲಗಳು (Eligible loans) ಎಂದರೆ 1–4–1986 ರಂದು ಮತ್ತು ಆ ಬಳಿಕ ಸಾಲಗಾರ ಪಡೆದ ಅಲ್ಪಾವಧಿ ಸಾಲದ ಭಾಗ, ಮಾರ್ಪಾಡು ಮಾಡಲಾದ (Converted)/ ಪುನರ್ವಿಂಗಡಿಸಲಾದ (re–scheduled) ಮಧ್ಯಾವಧಿ ಸಾಲಗಳು, ಮತ್ತು 2–10–1986 ರ ನಂತರ ಮರುಪಾವತಿಯಾಗಬೇಕಾಗಿದ್ದ ಅವಧಿ ಸಾಲದ ಕಂತುಗಳು, 'ಅನ್ವಯವಾಗುವ ದಿನಾಂಕ' (2–10–1989) ರಂದು ಸುಸ್ತಿ ಬಡ್ಡಿ ಸಹಿತ ಬಾಕಿ ಇರುವ ಸುಸ್ತಿ ಸಾಲಗಳು.

ಇಲ್ಲಿ ಅಣೇವಾರಿ ಶರತ್ತು ಅನ್ವಯವಾಗುತ್ತದೆ. ಆ ಪ್ರಕಾರ, ಸುಸ್ತಿ ಬಾಕಿಯಾದ ವರ್ಷ ಫಸಲು ನಷ್ಟ ವರ್ಷವಾಗಿದ್ದು, ಇನ್ನು ಉಳಿದ ಎರಡು ವರ್ಷಗಳಲ್ಲೂ ಒಂದು ವರ್ಷವು ಫಸಲು ನಷ್ಟ ವರ್ಷ ಎಂದು ಘೋಷಿತವಾಗಿರಬೇಕು.

ಕೆ. ಗೋವಿಂದ ಭಟ್

ಜೂನ್ 1986 ರಲ್ಲಿ ರೂ 5000/– ವಿತರಣೆಯಾಯಿತು. ಫೆಬ್ರುವರಿ 1987 ರಲ್ಲಿ ಮರುಪಾವತಿಯಾಗಬೇಕೆಂದು ನಿರ್ಧರಿಸಲಾಯಿತು. ಸಾಲ ಮರುಪಾವತಿಯಾಗದೆ ಸುಸ್ತಿ ಬಾಕಿಯಾಯಿತು. 1987 ಫಸಲು ನಷ್ಟ ವರ್ಷವಾಗಿದ್ದು, 1988 ಅಥವಾ 1989 ರಲ್ಲಿ ಕೂಡ ಯಾವುದಾದರೂ ಒಂದು ವರ್ಷ ಅಥವಾ ಎರಡೂ ವರ್ಷ ಫಸಲು ನಷ್ಟ ಆಗಿದ್ದರೆ ಈ ಉದಾಹರಿತ ಸಾಲವು ಮನ್ನಾ ಹೊಂದಲು ಅರ್ಹವಾಗುತ್ತದೆ

ಅರ್ಹತೆಗೆ ಆಧಾರ : 1987 ಫಸಲು ನಷ್ಟ ವರ್ಷವಾಗಿದ್ದು, 1988 ಅಥವಾ 1989 ರಲ್ಲಿ ಯಾವುದಾದರೊಂದು ಅಥವಾ ಎರಡೂ ವರ್ಷ ಫಸಲು ನಷ್ಟ ವರ್ಷವೆಂದು ಶಿಫಾರಸಾಗಿರಬೇಕು ಅಥವಾ 1988 ಫಸಲು ನಷ್ಟ ವರ್ಷವಾಗಿದ್ದು 1987 ಅಥವಾ 1989 ಇವುಗಳಲ್ಲಿ ಒಂದು ಅಥವಾ ಎರಡೂ ವರ್ಷ ಫಸಲು ನಷ್ಟ ವರ್ಷ ಎಂದು ಶಿಫಾರಸಾಗಿರಬೇಕು.

1989 ಮಾತ್ರ ಫಸಲು ನಷ್ಟ ವರ್ಷವಾದರೆ ಮನ್ನಾ ಹೊಂದಲು ಅರ್ಹತೆ ಇಲ್ಲ.

ಫಸಲು ನಷ್ಟ ವರ್ಷ ಎಂದು ನಿರ್ಧರಿಸುವ ಆಧಾರ ಹೀಗಿದೆ :

1987 : (1) 1986 ರ ಮುಂಗಾರು ಮತ್ತು / ಅಥವಾ (2) 1986–87 ರ ಹಿಂಗಾರು ಬೆಳೆ ನಷ್ಟವಾಗಿರಬೇಕು. 1988 : (1) 1987 ರ ಮುಂಗಾರು ಮತ್ತು/ಅಥವಾ (2) 1987 – 88 ರ ಹಿಂಗಾರು ಬೆಳೆ ನಷ್ಟವಾಗಿರಬೇಕು. 1989 : (1) 1988ರ ಮುಂಗಾರು ಮತ್ತು/ಅಥವಾ (2) 1988–89 ರ ಹಿಂಗಾರು ಬೆಳೆ ನಷ್ಟವಾಗಿರಬೇಕು.

ಮನ್ನಾ ಅರ್ಹತೆಯನ್ನು ನಿರ್ಧರಿಸಲು ಫಸಲು ನಷ್ಟ ವರ್ಷಗಳು ಒಂದರ ಬೆನ್ನಲ್ಲೇ ಇನ್ನೊಂದು ಬರಬೇಕೆಂಬ ನಿರ್ಬಂಧವೇನೂ ಇಲ್ಲ.

ತೀವ್ರ ಸುಸ್ತಿ ಬಾಕಿ : 1984ರ ಜೂನ್‌ನಲ್ಲಿ ರೂ. 10,000 ದೀರ್ಘಾವಧಿ ಸಾಲ ವಿತರಿಸಲಾಯಿತು. 10 ಸಮಾನ ವಾರ್ಷಿಕ ಕಂತುಗಳ ಮರುಪಾವತಿಯನ್ನು ನಿರ್ಧರಿಸಲಾಯಿತು. 1985 ರ ಮಾರ್ಚಿಯಲ್ಲಿ ಪಾವತಿ ಮಾಡಬೇಕಾದ ಮೊದಲ ಕಂತು ಪಾವತಿ ಮಾಡಲಾಯಿತು. ಆದರೆ 2–10–1989 ರ ವರೆಗೆ ಉಳಿದ ಕಂತು ಮತ್ತು ಬಡ್ಡಿ ಸುಸ್ತಿ ಬಾಕಿಯಾಯಿತು. ಇದರಲ್ಲಿ 2–10–1986 ರ ಮೊದಲು ಬಾಕಿ ಉಳಿದ ಸುಸ್ತಿ ಬಾಕಿಯನ್ನು 'ತೀವ್ರ ಸುಸ್ತಿ ಬಾಕಿ' (Chronic overdue) ಎಂದು ಪರಿಗಣಿಸಿ ಮನ್ನಾ ಹೊಂದಲು ಅರ್ಹತೆ ನೀಡಲಾಗುತ್ತದೆ. ಪ್ರಸ್ತುತ ಉದಾಹರಣೆಯಲ್ಲಿ 1986 ರ ಮಾರ್ಚಿ ತಿಂಗಳಲ್ಲಿ ಪಾವತಿ ಮಾಡಬೇಕಾದ 1000/– ರೂ. ಕಂತು ಮತ್ತು ವಾರ್ಷಿಕ ಬಡ್ಡಿ 'ತೀವ್ರ ಸುಸ್ತಿ' ಬಾಕಿಯಾಗಿದ್ದು ಮನ್ನಾ ಹೊಂದಲು ಅರ್ಹ. ಆದರೆ 1987, 1988 ಮತ್ತು 1989 ಇವುಗಳಲ್ಲಿ ಯಾವುದಾದರೂ ಎರಡು ವರ್ಷ ಫಸಲು ನಷ್ಟ ವರ್ಷಗಳೆಂದು ಘೋಷಿಸಲ್ಪಟ್ಟರೆ ಆ ವರ್ಷದ ಸುಸ್ತಿ ಬಾಕಿಯು 'ಅನುದ್ದೇಶಿತ ಸುಸ್ತಿ ಬಾಕಿ' (non–wilful default) ಎಂದು ಪರಿಗಣಿಸಲ್ಪಟ್ಟು ಮನ್ನಾ ಹೊಂದಲು ಅರ್ಹವಾಗುತ್ತದೆ.

ಮನ್ನಾ ಹೊಂದಲು ಅರ್ಹವಾಗಬೇಕಾದರೆ ಆಧಾರ : 1987 ಫಸಲು ನಷ್ಟ ವರ್ಷವಾಗಿದ್ದು 1988 ಅಥವಾ 1989ರ ಪೈಕಿ ಒಂದು ಅಥವಾ ಎರಡೂ ಫಸಲು ನಷ್ಟ ವರ್ಷವಾಗಿರಬೇಕು. (2-10–1986ರಿಂದ 31–12–1987) 1988 ಫಸಲು ನಷ್ಟ ವರ್ಷವಾಗಿದ್ದು, 1987 ಮತ್ತು/ಅಥವಾ 1989 ಫಸಲು ನಷ್ಟ ವರ್ಷವಾಗಿರಬೇಕು 1989 ಫಸಲು ನಷ್ಟ ವರ್ಷವಾಗಿದ್ದು 1987 ಮತ್ತು/ ಅಥವಾ 1988 ಫಸಲು ನಷ್ಟ ವರ್ಷವಾಗಿರಬೇಕು.

1984ರ ಜೂನ್ ತಿಂಗಳಲ್ಲಿ 6000/– ರೂ. ಅಲ್ಪಾವಧಿ ಸಾಲ ವಿತರಿಸಲಾಯಿತು. 1985ರ ಫೆಬ್ರುವರಿಯಲ್ಲಿ ಮರು ಪಾವತಿಯಾಗಬೇಕಾಗಿದೆ. 1985 ಫಸಲು ನಷ್ಟ ವರ್ಷವೆಂದು ಘೋಷಿಸಲ್ಪಟ್ಟು 1985ರ ಮಾರ್ಚಿ ತಿಂಗಳಿನಲ್ಲಿ ಇದನ್ನು 2000 ರೂ. ಗಳ ಮೂರು ವಾರ್ಷಿಕ ಸಮಾನ ಕಂತುಗಳಲ್ಲಿ ಮರು ಪಾವತಿಸುವ, ಮಧ್ಯಮಾವಧಿ ಸಾಲವಾಗಿ ಪರಿವರ್ತಿಸಲಾಯಿತು. ಈ ಸಾಲವು 2–10–1989 ರ ಮೊದಲೇ ಸುಸ್ತಿ ಬಾಕಿಯಾಗಿರುವುದರಿಂದ 2–10–1989 ರಂದು ಈ ಸಾಲದಲ್ಲಿ ಬಾಕಿ ಇರುವ ಮೊತ್ತ 10,000/– ರೂ. ಪರಿಮಿತಿಗೆ ಒಳಪಟ್ಟು ಮನ್ನಾ ಹೊಂದಲು ಅರ್ಹವಾಗಿದೆ.

ತೀವ್ರ ಸುಸ್ತಿ ಬಾಕಿದಾರ (chronic defaulter) ಎಂದರೆ 2–10–1989 ರಂದು ಮೂರು ವರ್ಷಕ್ಕಿಂತ ಹಳೆಯದಾದ ಸುಸ್ತಿ ಉಳಿಸಿಕೊಂಡವನು. ಇಂತಹ ಸುಸ್ತಿ ಬಾಕಿ ಮತ್ತು ಸುಸ್ತಿ ಬಡ್ಡಿ ಮನ್ನಾ ಹೊಂದಲು ಅರ್ಹವಾಗಿದೆ. ಅಣೇವಾರಿ ಶರತ್ತು ಕೂಡ ಇಲ್ಲಿ ಪ್ರಸ್ತುತವಲ್ಲ. ಇಂತಹ ಸುಸ್ತಿ ಬಾಕಿಗೆ ಕಾರಣವೇನೆಂದು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ.

ಅರ್ಹತೆ : ನಗದು ಉದರಿ (cash credit) ಖಾತೆಗಳು 2–10–1986 ರಂದು ನವೀಕರಿಸದಿದ್ದಲ್ಲಿ ಅಥವಾ ವಾಪಸು ಕರೆದಿದ್ದರೆ (recalled) ಅಂತಹ ಸಾಲಗಳಲ್ಲಿ 2–10–1989 ರಂದು ಬಾಕಿ ಇರುವ ಮೊತ್ತ ಕೂಡ ತೀವ್ರ ಸುಸ್ತಿ ಬಾಕಿ ಎಂದು ಪರಿಗಣಿಸಲಾಗಿದ್ದು ಮನ್ನಾ ಹೊಂದಲು ಅರ್ಹವಾಗಿದೆ.

2–10–1989 ಕ್ಕಿಂತ ಹಿಂದೆ ಸಾಲಗಾರ ತೀರಿಕೊಂಡಿದ್ದರೆ ಅಂತಹ ಸಾಲಗಳು ಮನ್ನಾ ಹೊಂದಲು ಅರ್ಹವಾಗಿವೆ. ಸುಸ್ತಿ ಬಾಕಿದಾರನು 2–10–1989ರ ಮೊದಲು ದಿವಾಳಿಯೆಂದು ಘೋಷಿಸಲ್ಪಟ್ಟಿದ್ದರೆ ಅಥವಾ ದಿವಾಳೀ ಅರ್ಜಿಯು ನ್ಯಾಯಾಲಯದಲ್ಲಿ ತೀರ್ಪಿಗಾಗಿ ಕಾಯುತ್ತಿದ್ದರೆ ಅಂತಹ ಸಾಲಗಳು ಕೂಡ ಮನ್ನಾ ಹೊಂದಲು ಅರ್ಹ. ಅನುದ್ದೇಶಿತ ಸುಸ್ತಿ ಬಾಕಿದಾರ (non-wilful defaulter) ಎಂದರೆ ಸಾಲವನ್ನು/ಸಾಲದ ಕಂತುಗಳನ್ನು ಪಾವತಿ ಮಾಡದವನಾಗಿದ್ದು, ಎರಡು ಅಥವಾ ಹೆಚ್ಚು ವರ್ಷಗಳಲ್ಲಿ ಫಸಲು ನಷ್ಟ ಹೊಂದಿದ್ದು, ಫಸಲು ನಷ್ಟ ವರ್ಷದಲ್ಲಿ ಸುಸ್ತಿ ಬಾಕಿ ಉಳಿಸಿರಬೇಕು.

ಕುಶಲಕರ್ಮಿ ಮತ್ತು ನೇಕಾರರ ವಿಚಾರದಲ್ಲಿ ಸಾಲದಿಂದ ಪಡೆದ ಸ್ವತ್ತು ನಷ್ಟ ಹೊಂದಿ ಅಥವಾ ಕಳವೆಯಾಗಿ ಮರು ಪಾವತಿ ಅಸಾಧ್ಯವಾಗಿದ್ದರೆ ಅಂಥವರನ್ನು ಅನುದ್ದೇಶಿತ ಸುಸ್ತಿ ಬಾಕಿದಾರ ಎಂದು ಪರಿಗಣಿಸಬೇಕು. ಇಂತಹ ಸುಸ್ತಿದಾರರ ಸಾಲಗಳು ಕೂಡ ಮನ್ನಾ ಹೊಂದಲು ಅರ್ಹವಾಗಿವೆ.

ಅರ್ಹ ಸಾಲಗಳ ಗುರುತಿಸುವಿಕೆ : ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ರೂ. 10,000 ಮೀರದಂತೆ ಅರ್ಹ ಸಾಲಗಳನ್ನು ಗುರುತಿಸಿ ಮನ್ನಾ ಪರಿಹಾರವನ್ನು ಸಾಲಗಾರರಿಗೆ ನೀಡುತ್ತವೆ. ಪ್ರತಿಯೊಂದು ಕ್ಷೇತ್ರ (block) ದ ಮಾರ್ಗದರ್ಶಿ ಬ್ಯಾಂಕಿನ (lead bank) ವ್ಯವಸ್ಥಾಪಕರು ಈ ಯೋಜನೆಯ ಅನುಷ್ಠಾನದ ಸಂಯೋಜಕರಾಗಿ ಕಾರ್ಯ ನಿರ್ವಹಿಸುವರು. ಸಂಯೋಜಕರು (co-ordinator) ತಮ್ಮ ಕ್ಷೇತ್ರದ ಎಲ್ಲಾ ಸಂಬಂಧಿತ ಬ್ಯಾಂಕರುಗಳ ಸಭೆ ಕರೆದು ಸಾಲಗಾರರ ಪಟ್ಟಿಯನ್ನು ಪರಿಶೀಲಿಸಿ ಅರ್ಹ ಸಾಲಗಾರರನ್ನು ಗುರುತಿಸಿ ನಿರ್ಧರಿಸುತ್ತಾರೆ.

(4ನೇ ಪುಟಕ್ಕೆ)

'ಜನತಾ' ಮತ್ತು 'ಗ್ರಾಮೀಣ' ಅಪಘಾತ ವಿಮೆ :
ಗ್ರಾಮೀಣ ಕಾರ್ಮಿಕರಿಗೆ, ಕೃಷಿಕರಿಗೆ ಒಂದು ವರದಾನ

'ಯುನೈಟೆಡ್ ಇಂಡಿಯಾ' ಮುಂತಾದ ಸಾಮಾನ್ಯ ವಿಮಾ ಕಂಪೆನಿಗಳವರು 'ಜನತಾ ಅಪಘಾತ ವಿಮೆ' ಎಂಬ ವಿಮಾ ಸೌಲಭ್ಯ ನೀಡುತ್ತಿದ್ದಾರೆ. ಇದನ್ನು ಯಾರು ಬೇಕಾದರೂ (ನೌಕರರು, ವ್ಯಾಪಾರಿಗಳು ಮುಂತಾದವರು ಸಹ) ಮಾಡಿಸಬಹುದಾದರೂ, ಇದು ಮುಖ್ಯವಾಗಿ ಕೃಷಿಕರಿಗೆ ಹಾಗೂ ಕೃಷಿ ಮತ್ತು ಇತರ ಕಾರ್ಮಿಕರಿಗೆ ಅತ್ಯಂತ ಉಪಯುಕ್ತವಾಗಿದೆ.

ಈ ವಿಮೆ ಮಾಡಿಸಿದ ವ್ಯಕ್ತಿಗೆ ಯಾವುದೇ ರೀತಿಯ ಅಪಘಾತವಾಗಿ ಆತನ ಅಂಗಗಳು ಶಾಶ್ವತವಾಗಿ ಊನವಾದರೆ ಅದಕ್ಕೆ ಇಂಥಿಂಥ ಅಂಗಕ್ಕೆ ಇಂತಿಷ್ಟು ಎಂದು ಪರಿಹಾರ ದೊರೆಯುತ್ತದೆ. ಅಪಘಾತದಿಂದ ಆಕಸ್ಮಾತ್ ಮರಣವೇ ಸಂಭವಿಸಿದರೆ ಆತನ ಕುಟುಂಬದವರಿಗೆ 15 ಸಾವಿರ ರೂ. ವಿಮಾ ಹಣ ದೊರೆಯುತ್ತದೆ.

ಈ ವಿಮೆಗೆ ಕಟ್ಟಬೇಕಾದ ಹಣ ವರ್ಷಕ್ಕೆ ಕೇವಲ 12 ರೂ. ಮಾತ್ರ. ಅಪಘಾತ ಇತ್ಯಾದಿ ಆಗದಿದ್ದರೆ ಈ ಹಣ ವಾಪ್ಸು ಬರುವುದಿಲ್ಲ, ನಿಜ. ಆದರೆ, ಇಂದಿನ ಅಪಘಾತಮಯ ಬದುಕಿನಲ್ಲಿ, ಕೇವಲ ಇಷ್ಟು ಸ್ವಲ್ಪ ಹಣ ಕಟ್ಟುವುದರಿಂದ ದೊರೆಯುವ ರಕ್ಷಣೆ–ಮರಣ ಸಂಭವಿಸಿದರೆ ಮಾತ್ರವಲ್ಲ, ಅಂಗಗಳು ಊನವಾದಾಗಲೂ ಸಿಗುವ ಪರಿಹಾರ–ಬಹಳ ಅಮೂಲ್ಯವಾದುದಲ್ಲವೆ?

ಒಂದೇ ಸಲಕ್ಕೆ 12 ರೂ. ಸಹ ಕಟ್ಟಲಾರದ ಬಡವರಿಗಾಗಿ ಇದೇ ರೀತಿಯ ಇನ್ನೊಂದು ವಿಮೆ ಇದೆ–'ಗ್ರಾಮೀಣ ಅಪಘಾತ ವಿಮೆ' ಎಂಬುದು. ಇದರ ನಿಯಮಗಳೂ ಮೇಲಿನಂಥವೇ. ಆದರೆ ವರ್ಷದ ಕಂತು ಮಾತ್ರ 5 ರೂ. ಹಾಗೆಯೇ ಪರಿಹಾರದ ಮೊತ್ತವೂ ಅದೇ ಪ್ರಮಾಣದಲ್ಲಿ ಸ್ವಲ್ಪ ಕಡಿಮೆ. ಮರಣ ಸಂಭವಿಸಿದರೆ ಸಿಗುವ ಹಣ 6000 ರೂ.

ಬಹಳಷ್ಟು ಜನ ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ ಈ ವಿಮೆಯ ಬಗ್ಗೆ ಗೊತ್ತೇ ಇಲ್ಲ. ಗೊತ್ತಿದ್ದವರೂ ಇದರ ಪ್ರಯೋಜನ ಪಡೆದುಕೊಳ್ಳುತ್ತಿಲ್ಲ. ಯಾವುದೇ ರೀತಿಯ ಅಪಘಾತಗಳು ಸಂಭವಿಸಿದರೂ ಸಾಲ ಸೋಲ ಮಾಡಿ ಉಪಚಾರ ಪಡೆಯುತ್ತಾರೆ. ಬಹುಶಃ ವಿಮಾ ಸೌಲಭ್ಯದ ಬಗೆಗೆ ಅಪನಂಬಿಕೆಯೂ ಕೆಲವರಿಗೆ ಕಾರಣವಿರಬಹುದು. ಅಂಥವರಿಗಾಗಿ, ಇತ್ತೀಚೆಗೆ ಈ ಸೌಲಭ್ಯದ ಪ್ರಯೋಜನ ಪಡೆದ ಒಬ್ಬ ಕೃಷಿ ಕಾರ್ಮಿಕರ ಉದಾಹರಣೆ ಇಲ್ಲಿದೆ.

ಶೃಂಗೇರಿ ತಾ|| ಬೋಳೂರಿನ ಎಚ್.ಕೆ. ರಮೇಶ್ ಅಡಿಕೆ ಕೊನೆ ತೆಗೆಯುವ ವೃತ್ತಿಯವರು. ಅವರು ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂಪೆನಿಯ ಅಭಿವೃದ್ಧಿ ಅಧಿಕಾರಿಯಾದ ಸಂಪತ್‌ಕುಮಾರ್ ನೇತೃತ್ವದ ಪ್ರತಿನಿಧಿಯಾದ ಹಣಗಲು ಪ್ರವೀಣ್‌ರ ಬಳಿ ಜನತಾ ಅಪಘಾತ ವಿಮೆ ಮಾಡಿಸಿದ್ದರು. ಸ್ವಲ್ಪ ಸಮಯದಲ್ಲೇ ಅಡಿಕೆ ಮರದಿಂದ ಬಿದ್ದು ಅವರ ಎಡಗೈ ಶಾಶ್ವತವಾಗಿ ಊನವಾಯಿತು. ವಿಮಾ ಕಂಪೆನಿ ಅವರಿಗೆ 7500 ರೂ. ಪರಿಹಾರ ನೀಡಿತು. ಇದು ದೊರೆಯಲು ತುಂಬಾ ಶ್ರಮಿಸಿದ ಶ್ರೀ ಸಂಪತ್ ಕುಮಾರ್, ತೀರ್ಥಹಳ್ಳಿಯ ಮೂಳೆ ವೈದ್ಯರಾದ ಡಾ|| ಉಪಾಧ್ಯಾಯ ಹಾಗೂ ಹಣಗಲು ಪ್ರವೀಣ ಇವರುಗಳಿಗೆ ರಮೇಶ್ ತುಂಬ ಕೃತಜ್ಞತೆ ಸಲ್ಲಿಸುತ್ತಾರೆ.

ಈ ಹಿಂದೆ ಇದೇ ವೃತ್ತಿಯ ಸಿಗದಾಳಿನ ಶಾಡಪ್ಪ ಎಂಬವರು ಮರದಿಂದ ಬಿದ್ದು ಮೃತಪಟ್ಟಾಗ ಅವರ ಕುಟುಂಬದವರಿಗೆ 15 ಸಾವಿರ ರೂ. ವಿಮೆ ಬಂದಿದ್ದು, ಅವರ ಬದುಕಿಗೆ ಆಧಾರವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಅಂದ ಮಾತ್ರಕ್ಕೆ ಈ ವಿಮಾ ಸೌಲಭ್ಯ ಕೊನೆ ತೆಗೆಯುವ ವೃತ್ತಿಯವರಿಗೆ ಮಾತ್ರ ಎಂದೇನಲ್ಲ. ಹಾಗೆಯೇ, ಕೆಲಸ ಮಾಡುತ್ತಿರುವಾಗ ಅಪಘಾತವಾದರೆ ಮಾತ್ರ ಪರಿಹಾರ ಎಂತಲೂ ಅಲ್ಲ. ಯಾವುದೇ ರೀತಿಯ ಅಪಘಾತವಾದಾಗಲೂ ಇದು ಅನ್ವಯವಾಗುತ್ತದೆ.

ಜಮೀನ್ದಾರರುಗಳು ಕೂಡ ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ವಿಮೆ ಮಾಡಿಸಿ, ಅವರ ಸಂಬಳದಿಂದ ಒಂದೊಂದು ರೂ.ಗಳನ್ನು ಮುರಿದುಕೊಳ್ಳಬಹುದು. ಇದರಿಂದ ಅವರಿಗೆ ಕೂಡ ಆಗುವ ಒಂದು ಪ್ರಯೋಜನವೆಂದರೆ, ಏನಾದರೂ ಆಕಸ್ಮಿಕ ಸಂಭವಿಸಿದಲ್ಲಿ ತಮ್ಮ ಕಾರ್ಮಿಕರಿಗಾಗಿ ತಾವು ಹೊರಬೇಕಾಗುವ ಹೊರೆಯೂ ಕಡಿಮೆಯಾಗುತ್ತದೆ. ● ಅನಿಲ್ ಕುಮಾರ್

ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರ

(2ನೇ ಪುಟದಿಂದ)

ನಿರಾಧಾರವಾದ ಹೇಳಿಕೆಗಳಾಗುತ್ತವೆ. ಪರಿಸರ ಉಳಿಯುವುದರಿಂದ ಸಮಸ್ತ ಸಮಾಜದ ಏಳಿಗೆಗೆ ಕಾರಣವಾಗುತ್ತದೆ.

ಪರಿಸರವನ್ನು ನಾಶವಾಗಲು ಬಿಟ್ಟು ನಂತರ ಪರಿತಪಿಸಿ ಅದರ ಮರು ಹುಟ್ಟುವಿಕೆಗೆ ಕಾಯುವುದಕ್ಕಿಂತ ನಾಶವಾಗುವ ಮೊದಲೇ ರಕ್ಷಿಸುವುದು ಒಳಿತಲ್ಲವೆ ?

ಮಾನವನ ಸಾಮಾಜಿಕ ಪರಿಸರದ ರಕ್ಷಣೆ ಮುಖ್ಯ ನಿಜ. ಅದರೊಂದಿಗೆ ಪ್ರಾಕೃತಿಕ ಪರಿಸರದ ರಕ್ಷಣೆಯೂ ಜೊತೆಯಾಗಿ ಸಾಗಬೇಕೇ ವಿನಃ ಬೇರೆ ಬೇರೆಯಲ್ಲ. ಸಮಾಜದ ವ್ಯವಸ್ಥೆಯಲ್ಲಿ ಸಮತೋಲನ ಕಾಯ್ದುಕೊಳ್ಳಬೇಕೇ ವಿನಃ ಯಾವುದೇ ಒಂದಕ್ಕೆ ಪ್ರಾಮುಖ್ಯತೆ ಕೊಡಬಾರದು.

—'ಸ.ಶಂ.ರಾ ' ಸಂಪೆಮನೆ

ಬಾಳೆಹೊನ್ನೂರಿಗೆ ಕೀರ್ತಿ ತಂದ ಕಮಲಾದೇವಿ

ಬಾಳೆಹೊನ್ನೂರು ಕಿರಿಯ ಕಾಲೇಜಿನ ಪಿ. ಯು. ಸಿ. ಎರಡನೇ ವರ್ಷದ ವಿದ್ಯಾರ್ಥಿನಿ ಕು| ಎನ್. ಪಿ. ಕಮಲಾದೇವಿ (ಸ್ಥಳೀಯ ನಾಡ ಕಛೇರಿಯ ಉಪ ತಹಸಿಲ್ದಾರ್ ಎನ್. ಪ್ರಭಾಕರ ರಾಯರ ಪುತ್ರಿ) 600ಕ್ಕೆ 428 ಅಂಕ ಪಡೆದು, ಚಿಕ್ಕಮಗಳೂರು ಜಿಲ್ಲೆಗೇ ಮೊದಲನೆಯವಳಾಗಿ ತೇರ್ಗಡೆ ಹೊಂದಿ ಊರಿಗೆ ಹೆಮ್ಮೆಯನ್ನೂ, ವಿದ್ಯಾ ಸಂಸ್ಥೆಗೆ ಕೀರ್ತಿಯನ್ನೂ ತಂದಿದ್ದಾಳೆ.

ಜು. 7 ರಂದು ಸ್ಥಳೀಯ ರೋಟರಿ ಕ್ಲಬ್ ವತಿಯಿಂದ ಈ ಪ್ರತಿಭಾವಂತೆಗೆ ಸನ್ಮಾನ ಸಮಾರಂಭ ಏರ್ಪಡಿಸಿ ಶುಭಾಶಯ ಕೋರಿದರು. ವಿದ್ಯಾ ಸಂಸ್ಥೆಯ ಪ್ರಿನ್ಸಿಪಾಲ್ ಪುರುಷೋತ್ತಮರವರನ್ನೂ ಸಮಾರಂಭದಲ್ಲಿ ಗೌರವಿಸಲಾಯಿತು.

ಸಂಗೀತದಲ್ಲಿಯೂ ಒಲವು ಹೊಂದಿರುವ ಕಮಲಾದೇವಿ, ಈಗಾಗಲೇ ಭಾವಗೀತೆ, ಜಾನಪದ ಗೀತೆಗಳನ್ನು ಹಾಡುವುದರಲ್ಲಿ ಸಾಕಷ್ಟು ಬಹುಮಾನಗಳನ್ನು ಪಡೆದಿದ್ದಾಳೆ.

ಸರಳ ವಿವಾಹ

ಕೊಪ್ಪ ತಾಲ್ಲೂಕು ಹೇರೂರು ಗ್ರಾಮದ ಬರಗಲ್‌ನ ಕಾಫಿ ಬೆಳೆಗಾರರಾದ ವೀರಪ್ಪ ಗೌಡರ ಮಗ ಲಕ್ಷ್ಮಣ್ ಮತ್ತು ದಿಡಿಗೆ ನಾಗಪ್ಪ ಗೌಡರ ಪುತ್ರಿ ಶ್ರೀಮತಿ ಇವರ ಸರಳ ವಿವಾಹವು ಇತ್ತೀಚೆಗೆ (25-6-90) ಶಾಂಡ್ಯದ ದೇವಸ್ಥಾನದಲ್ಲಿ ನೆರವೇರಿತು. ಭಾಗವಹಿಸಿದ್ದ 25ರಿಂದ 30 ಜನ ಬಳಗದವರಿಗೆ ಲಘು ಉಪಾಹಾರದ ಏರ್ಪಾಡು ಮಾಡಲಾಗಿತ್ತು.

ಈ ಆದರ್ಶ ಯುವ ಜೋಡಿಗೆ 'ಮುಂಜಾವು' ಬಳಗದ ಶುಭಾಶಯಗಳು.

ಸಾಲ ಮನ್ನಾ ಅರ್ಥ ವಿವರಣೆ

(3ನೇ ಪುಟದಿಂದ)

ಮೇಲೆ ಹೇಳಿದಂತೆ ಮನ್ನಾದ ರಿಯಾಯಿತಿ ಪಡೆದು ಹಳೆ ಸಾಲ ಚುಕ್ತಾ ಮಾಡಿದ ಫಲಾನುಭವಿಗಳು ಮತ್ತೆ ಹೊಸ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಆದರೆ 2-10-1989ರ ಬಳಿಕದ ಬಡ್ಡಿ ಅಥವಾ ಕಂತು ಬಾಕಿ ಉಳಿದರೆ ಅವನು ಸುಸ್ತಿಬಾಕಿದಾರನೇ! ಅನ್ವಯ ದಿನಾಂಕದ ಬಳಿಕ ಹೊಂದಾಣಿಕೆ ಮಾಡಲಾದ ಸಾಲದ ಖಾತೆಯಲ್ಲಿ ಬಾಕಿ ಉಳಿಯುವ ಸಾಲದ ಮೊತ್ತಕ್ಕೆ ಸಾಲ ಚುಕ್ತಾವರೆಗೆ ವಿಧಿಸಲಾಗುವ ಬಡ್ಡಿಯನ್ನು ಫಲಾನುಭವಿಗಳೇ ಭರಿಸಬೇಕು

ಚಿನ್ನಾಭರಣ ಯಾ ಬ್ಯಾಂಕು ಠೇವಣಿಯ ಮೇಲೆ ಕೃಷಿ ಚಟುವಟಿಕೆಗಾಗಿ ನೀಡಿದ ಸಾಲಗಳು ಕೂಡ ಮೇಲಿನ ನಿಯಮಗಳಿಗೆ ಒಳಪಟ್ಟು ಮನ್ನಾ ಹೊಂದಲು ಅರ್ಹವಾಗಿವೆ

ಎತ್ತಿನಗಾಡಿ, ಒಂಟೆಗಾಡಿ, ಟ್ರಾಕ್ಟರು, ಟಿಲ್ಲರುಗಳಿಗೆ ನೀಡಿದ ಸಾಲಗಳು ಕೂಡ ಕೃಷಿ ಸಾಲಗಳೆಂದು ಪರಿಗಣಿಸಲ್ಪಟ್ಟು ಮೇಲಿನ ನಿಯಮಗಳಿಗೆ ಒಳಪಟ್ಟು ಮನ್ನಾ ಹೊಂದಲು ಅರ್ಹತೆ ಪಡೆದಿವೆ.

ಸಾಲದಿಂದ ಖರೀದಿಸಲಾದ ಸ್ವತ್ತು (assets) ಗಳ ವಿಮೆಗಾಗಿ ನೀಡಿದ ವಿಮಾ ಕಂತು ಕೂಡ ಸಾಲವೆಂದೇ ಪರಿಗಣಿಸಲಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನಡೆಸಲಾಗುವ ಚಟುವಟಿಕೆಗಳಿಗೆ ಮಾತ್ರ ಮನ್ನಾ ಸೌಲಭ್ಯ ಸಿಗುತ್ತದೆ. ಅರೆನಗರ ಮತ್ತು ನಗರ ಪ್ರದೇಶದಲ್ಲಿ ನಡೆಸಲಾಗುವ 'ಕೃಷಿ' ಮತ್ತು ಪಟ್ಟಿ ಮಾಡಲಾದ ಇತರ ಚಟುವಟಿಕೆಗಳಿಗೆ ಮನ್ನಾ ರಿಯಾಯಿತಿ ಸಿಗುವುದಿಲ್ಲ.

ಈ ಸಾಲ ಮನ್ನಾ ಯೋಜನೆಯಲ್ಲಿ ಸಾಲ ಪಡೆದ ಉದ್ದೇಶ ಆಧಾರವೇ ಹೊರತು, ಸಾಲಗಾರ ಯಾವ ಪಂಗಡದವನೆಂಬುದು ಪ್ರಸ್ತುತವಲ್ಲ.

ಪ್ರತಿ ಬ್ಯಾಂಕಿನ ಪ್ರಬಂಧಕರು ನಿಯಮಗಳಿಗೆ ಅನುಸಾರವಾಗಿ ಅರ್ಹ ಸಾಲಗಾರರಿಗೆ ಸಾಲ ಮನ್ನಾ ಮಾಡುವ ಅಧಿಕಾರ ಹೊಂದಿರುತ್ತಾರೆ.

ಮನ್ನಾಕ್ಕೆ ಅರ್ಹವಾಗುವ ಮೊತ್ತವು ಸಾಲವನ್ನು ತೀರಿಸಲು ಸಾಕಾದರೆ, ಬ್ಯಾಂಕಿನವರು ಸಾಲದ ಖಾತೆಯನ್ನು ಚುಕ್ತಾ ಮಾಡಿ ಫಲಾನುಭವಿಗಳಿಗೆ ಲಿಖಿತ ತಿಳುವಳಿಕೆ ಕೊಡಬೇಕು. ಮನ್ನಾ ಹೊಂದಿದ ಮೊತ್ತ ಜಮಾ ಮಾಡಿದ ಬಳಿಕವೂ ಸಾಲ ಬಾಕಿ ಉಳಿದರೆ, ಆ ಬಗ್ಗೆ ಸಾಲಗಾರರಿಗೆ ತಿಳುವಳಿಕೆ ಕೊಡಬೇಕು.

10,000 ರೂ. ಗೂ ಮಿಕ್ಕಿದ ಸಾಲಗಳಲ್ಲಿ ಮನ್ನಾ ಸೌಲಭ್ಯ ಲಭ್ಯವಿದ್ದು, ನಿಯಮಗಳ ಅನುಸಾರವಾಗಿ 10,000 ರೂ. ವರೆಗೆ ರಿಯಾಯಿತಿ ನೀಡಬಹುದಾಗಿದೆ.

ಈ ಯೋಜನೆಯಿಂದ ಸರಕಾರದ ಖಜಾನೆಗೆ ಎಷ್ಟು ಹೊರೆ ಆಗಿದೆ ಎಂಬ ಅಂಕಿಸಂಖ್ಯೆಗಳು ಇನ್ನೂ ಲಭ್ಯವಿಲ್ಲದಿದ್ದರೂ ಇದು ಸಹಸ್ರಾರು ಕೋಟಿ ರೂಪಾಯಿಗಳ ಯೋಜನೆ ಎಂಬುದನ್ನು ಸಾರಾಸಗಟಾಗಿ ಊಹಿಸಬಹುದಾಗಿದೆ. ಜನಸಾಮಾನ್ಯರಿಂದ ಸಂಗ್ರಹಿಸಲಾದ ತೆರಿಗೆ ಹಣದಿಂದ ಯೋಜನೆ ಕಾರ್ಯಗತಗೊಂಡಿದೆ ಎಂಬುದನ್ನು ಮರೆಯುವಂತಿಲ್ಲ! **ಯೋಜನೆಯ ಉದ್ದೇಶವೇನೇ ಇದ್ದರೂ, ಸರಕಾರವು ಸೋಮಾರಿಯಾದ ಸುಸ್ತಿದಾರನಿಗೆ ಉತ್ತೇಜನ ನೀಡಿ, ಶ್ರಮಿಕನಾದ ನಿಷ್ಠಾವಂತ ಸಾಲಗಾರನಿಗೆ ಮೋಸ ಮಾಡಿದೆ ಎಂಬ ಅಪವಾದ ಮತ್ತು ಅವಹೇಳನಕ್ಕೆ ಗುರಿಯಾಗಿದೆ.**

ಈ ಸಂದರ್ಭದಲ್ಲಿ, ಭಾವೀ ಸಾಲಗಾರರು ಇಂತಹುದೇ ಯೋಜನೆಯ ರಿಯಾಯಿತಿಗಾಗಿ ಕಾಯದೇ, ಕಾಲ ಕಾಲಕ್ಕೆ ಬ್ಯಾಂಕ್ ಸಾಲಗಳನ್ನು ಮರುಪಾವತಿ ಮಾಡುವ ಹವ್ಯಾಸವನ್ನು ಬೆಳೆಸಬೇಕು. ಜನಮನದಲ್ಲಿ ಇದು ಮೂಡದಿದ್ದರೆ, ಬ್ಯಾಂಕುಗಳ ಆರೋಗ್ಯ ಹದಗೆಡುವುದರ ಜೊತೆಗೆ, ದೇಶದ ಪ್ರಗತಿ ಕುಂಠಿತವಾಗಬಹುದು. ಈ ನಿಟ್ಟಿನಲ್ಲಿ ಸರಕಾರ ಸೂಕ್ತ ಕ್ರಮ ಕೈಗೊಂಡು 'ಸಾಲ ಮನ್ನಾ'ದಿಂದ ಬಿಗಿ ತಪ್ಪಿದ ಬ್ಯಾಂಕ್ ಸಾಲ ಮರುಪಾವತಿ ಸಂಸ್ಕೃತಿಯನ್ನು ಪುನಃ ಸ್ಥಾಪಿಸಬೇಕಾದ ಅಗತ್ಯ ತುಂಬಾ ಇದೆ.

ಸೌಜನ್ಯ 'ಪ್ರಜಾವಾಣಿ'

ಓದುಗರ ಪತ್ರಗಳು

ಅಂಚೆ ಪೆಟ್ಟಿಗೆ ಸ್ಥಳಾಂತರಿಸಿ

ಪ್ರಿಯರೆ,

ಶೃಂಗೇರಿಯ ಮಲ್ಲಿಕಾರ್ಜುನ ಬೀದಿಯ ಸಣ್ಣ ರೈಸ್ ಮಿಲ್ ಹತ್ತಿರ ಇರುವ ಅಂಚೆ ಪೆಟ್ಟಿಗೆ ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗದಿರುವುದು ಕಂಡು ಬರುತ್ತದೆ. ಅದನ್ನೇ ಕೆರೆದಂಡೆಯಲ್ಲಿ ಆಗುಂಬೆ–ಕಿಗ್ಗ ರಸ್ತೆಗಳ ಚೌಕದ ಬಸ್ ಸ್ಟಾಪ್‌ನಲ್ಲಿಟ್ಟರೆ, ಸಾರ್ವಜನಿಕರಿಗೆ ಹೆಚ್ಚು ಉಪಯೋಗವಾಗುತ್ತದೆ.

ಅಂಚೆ ಇಲಾಖೆಯು ಈ ಸಣ್ಣ ಮನವಿಯನ್ನು ಈಡೇರಿಸಲೆಂದು ಬಯಸುತ್ತೇನೆ.

ಸಾರ್ವಜನಿಕರ ಪರವಾಗಿ,
—ಎಚ್. ಎಸ್. ಸುಬ್ರಮಣ್ಯ,
ಕೆರೆದಂಡೆ, ಶೃಂಗೇರಿ.

"ಜಯಪುರಕ್ಕೊಂದು ಹಿಂದೂ ರುದ್ರ ಭೂಮಿ ಆಗತ್ಯ"

ಪ್ರಿಯರೆ,

ಜಯಪುರದಲ್ಲಿ ಮುಸಲ್ಮಾನ ಹಾಗೂ ಕ್ರೈಸ್ತ ಬಾಂಧವರಿಗೆ ಸ್ಮಶಾನದ ವ್ಯವಸ್ಥೆ ಇದ್ದು, ಬಹು ಸಂಖ್ಯೆಯಲ್ಲಿರುವ ಹಿಂದೂಗಳಿಗೆ ಒಂದು ರುದ್ರಭೂಮಿಯಿಲ್ಲದಿರುವ ವಿಷಯ ಜನರಲ್ಲಿ ಚರ್ಚಿತವಾಗುತ್ತಿದೆ. ಈ ಹಿಂದೆ ಸ್ಥಳೀಯರು ಮಂಡಲ ಪಂಚಾಯ್ತಿಯವರಲ್ಲಿ ಈ ಬಗ್ಗೆ ಮನವಿ ಮಾಡಿದ್ದರೂ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಂತಿಲ್ಲ. ಯಾವುದೋ ನದಿಯ ತೀರದಲ್ಲಿ ಶವದಹನ ಮಾಡಬೇಕಾದ ಶೋಚನೀಯ ಪರಿಸ್ಥಿತಿ ಇದೆ.

ಸ್ಥಳೀಯ ಮಂಡಲ ಪ್ರಧಾನರು ಈ ವಿಷಯದ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ನಾಗರಿಕರ ಪರವಾಗಿ,
'ಕೌಶಿಕ', ಜಯಪುರ.

ಮಂಡಲ ಪ್ರಧಾನ ಎ. ಸಿ ವಜ್ರಪ್ಪ ಅವರ ಪ್ರತಿಕ್ರಿಯೆ : ಹಿಂದೂ ರುದ್ರ ಭೂಮಿಗಾಗಿ ಜಯಪುರ–ಕ್ಯಾಗೆ ರಸ್ತೆಯ ಗುಬ್ಬಿ ಬೈಲು ಎಂಬಲ್ಲಿ ಸ. ನಂ. 115ರಲ್ಲಿ 15 ಎಕರೆ ಜಾಗವನ್ನು 1982 ರಲ್ಲೇ ಮಂಜೂರು ಮಾಡಿಸಿ ಮೀಸಲಿಡಲಾಗಿದೆ. ಅಲ್ಲಿಗೆ ಅತಿ ಹತ್ತಿರದಲ್ಲೇ ಹೊಳೆಯೂ ಇದ್ದು, ಜಯಪುರ ಪಟ್ಟಣದಿಂದಲೂ ಬಹಳ ದೂರವೇನಿಲ್ಲ.

ಆದರೆ, ಜಯಪುರದ ನಾಗರಿಕರು ಇದನ್ನು ಸದುಪಯೋಗಪಡಿಸಿಕೊಳ್ಳದಿರುವುದು ನೋವಿನ ಸಂಗತಿ. ಅದರ ಬದಲು ಕೂಳೂರು ಹೊಳೆ ಮುಂತಾದ ಕಡೆಗೆ ಕೆಲವರು ಹೋದರೆ, ಜಮೀನುಳ್ಳವರು ತಮ್ಮ ತಮ್ಮ ಜಮೀನಿನಲ್ಲೇ ಸಂಸ್ಕಾರ ಮಾಡುತ್ತಿದ್ದಾರೆ.

ಇಲ್ಲಿ ಒಂದು ವಿಷಾದಕರ ಸನ್ನಿವೇಶವನ್ನು ಎತ್ತಿ ಹೇಳಬೇಕಾಗಿದೆ: ಕ್ರೈಸ್ತರು, ಮುಸ್ಲಿಮರು ತಮ್ಮೊಳಗೆ ಜಾತಿ ಭೇದವಿಲ್ಲದೆ, ಬಡವ–ಶ್ರೀಮಂತ ಎಂಬ ಭೇದ ಕೂಡ ಇಲ್ಲದೆ, ಶವಗಳನ್ನು ಪಕ್ಕ–ಪಕ್ಕದಲ್ಲಿ ಒಂದೇ ಕಡೆ ಹೂಳುತ್ತಾರೆ ಹೀಗಾಗಿ ಅವರಿಗೆ ಒಂದೊಂದು ಸಾಮೂಹಿಕ ರುದ್ರ ಭೂಮಿ ಇರಲು ಸಾಧ್ಯವಾಗಿದೆ.

ಆದರೆ ಹಿಂದುಗಳಲ್ಲಿ ಈ ಭಾವನೆ ಇದೆಯೆ? ಒಂದು ಜಾತಿಯವನ ಶವ ಸಂಸ್ಕಾರವಾದ ಜಾಗದ ಪಕ್ಕದಲ್ಲಿ ಇನ್ನೊಂದು ಜಾತಿಯವನಿಗೆ ಆಗುವುದಿಲ್ಲ. ಇನ್ನು ಶ್ರೀಮಂತರಿಗಂತೂ ಸಂಸ್ಕಾರದ ವಿಷಯದಲ್ಲಿ ಕೂಡ ಪ್ರತಿಷ್ಠೆ ಮೆರೆಯಬೇಕು. ಗುಬ್ಬಿ ಬೈಲಿನ ಹಿಂದೂ ರುದ್ರ ಭೂಮಿ ಸದುಪಯೋಗವಾಗದಿರಲು ಇದೇ ಕಾರಣ ಎಂದು ತಿಳಿಯಬಹುದಲ್ಲವೆ?

(ಇಂಥ ಕಾರಣವಿದ್ದೂ, ತಮ್ಮ ಕರ್ತವ್ಯ ಚ್ಯುತಿ ಇಲ್ಲದಿದ್ದಾಗಲೂ ವಿನಾಕಾರಣ ತಮ್ಮನ್ನು ದೂರುವ ಸಂಕುಚಿತ ಮನೋಭಾವದ ಬಗ್ಗೆ ವಜ್ರಪ್ಪನವರ ನೋವಿನ ನುಡಿ ಇದು. —ಸಂ.)

ಶೃಂಗೇರಿ ಅಡಿಕೆ ಬೆಳೆಗಾರರ ಸಂಘ ಸ್ತಬ್ಧವಾಗಿರುವುದೇಕೆ ?

ಪ್ರಿಯರೆ,

ನಮ್ಮ ಶೃಂಗೇರಿ ತಾಲ್ಲೂಕಿನ "ಅಡಿಕೆ ಬೆಳೆಗಾರರ ಸಂಘ" ಒಂದನ್ನು ಕಳೆದ ವರ್ಷ ರಚಿಸಲಾಗಿತ್ತು. ಅದಕ್ಕೂ ಸಹ ಕಾರಣ ಕರ್ತರು ಶೃಂಗೇರಿಯ ಜೂನಿಯರ್ ಛೇಂಬರ್‌ನವರು. ಈ ಸಂಸ್ಥೆ ಬೆಳೆಗಾರರನ್ನು ಒಂದು ಸಭೆಗೆ ಆಹ್ವಾನಿಸಿ ಈ ಸಂಘವನ್ನು ರಚಿಸುವಂತೆ ನಮ್ಮ ಮನ ಒಲಿಸಿದರು. ಹೆಚ್ಚಿನ ಸಭೆ–ಸಮಾರಂಭಗಳಿಗೆ, ಮೀಟಿಂಗ್‌ಗಳಿಗೆ ಕೋರಂ ಇರುವುದಿಲ್ಲ. ಆದರೆ, ಈ ಸಭೆಗೆ ಹೆಚ್ಚಿನ ಸಂಖ್ಯೆಯ ಬೆಳೆಗಾರರು ಭಾಗವಹಿಸಿದ್ದರು. ಕಾರಣ : ಸಂಕಟ ಬಂದಾಗ ವೆಂಕಟರಮಣ' ಎನ್ನುವಂತೆ ಕಳೆದ ವರ್ಷ ಮಳೆಗಾಲದಲ್ಲಿ ಭಾರಿ ಬಿರುಗಾಳಿ ಹಾವಳಿಯಿಂದಾಗಿ, ಸಂಘ ಮಾಡಿಕೊಂಡರೆ ಏನಾದರೂ ಪರಿಹಾರ ಸಿಕ್ಕಬಹುದು ಎನ್ನುವ ಆಸೆಯಿಂದ ಬಂದ ಬೆಳೆಗಾರರೇ ಹೆಚ್ಚು ಮಂದಿ

ಅಡಿಕೆ ಬೆಳೆಗಾರರ ಸಮಸ್ಯೆಗಳು ಅನೇಕ. ಮಲೆನಾಡಿನ ಮುಖ್ಯ ಬೆಳೆಯಾದ ಅಡಿಕೆಯನ್ನು ನಾಲೆ ಪ್ರದೇಶದ ಅಚ್ಚು ಕಟ್ಟು ಸ್ಥಳಗಳಲ್ಲಿ ಬೆಳೆಯುತ್ತಿರುವ ಬಗ್ಗೆ ಮತ್ತು ಇನ್ನಿತರ ನಿಜವಾದ ತೊಂದರೆಗಳ ಬಗ್ಗೆ ತೀವ್ರ ಕಳಕಳಿ ಇರುವಂಥವರು ಕೇವಲ ಬೆರಳೆಣಿಕೆಯಷ್ಟೇ ಮಂದಿ ಬಂದಿದ್ದರು ಅಲ್ಲಿ ಬಂದ ಬೆಳೆಗಾರರಿಗೆ, 'ಸದ್ಯದ ಪರಿಸ್ಥಿತಿಗೆ ಏನಾದರೂ ಪರಿಹಾರ ಸಿಕ್ಕಿದರೆ ಸಾಕು' ಎನ್ನುವ ಮನೋಭಾವವೇ ಹೆಚ್ಚಾಗಿತ್ತು. ಇದರಿಂದ ಪರಿಹಾರವಂತೂ ಸಿಕ್ಕಿಲ್ಲ, ಆ ಮಾತು ಹಾಗಿರಲಿ. ಆದರೆ ಸಂಘ ಮತ್ತೆಂದೂ ಬೆಳೆಗಾರರ ಸಭೆಯನ್ನು ಕರೆದಿಲ್ಲ. ಅದು ಈಗ 'ಕುಂಭ ಕರ್ಣ ನಿದ್ರೆ'ಯಲ್ಲಿರುವಂತೆ ತೋರುತ್ತದೆ. ಅದು ಎಚ್ಚರಗೊಳ್ಳಬೇಕಾದರೆ, ಇನ್ನೊಮ್ಮೆ 'ಚರಿತ್ರೆ ಮರುಕಳಿಸ' ಬೇಕೇನೋ?

ಆದರೆ, ನಮ್ಮ ನೆರೆಯ ತಾಲ್ಲೂಕಾದ ಕೊಪ್ಪದಲ್ಲಿ 'ಅಡಿಕೆ ಬೆಳೆಗಾರರ ಸಂಘ' ಎಷ್ಟೊಂದು ಸಕ್ರಿಯವಾಗಿ ಕೆಲಸ ಮಾಡುತ್ತಿದೆ! ನಿಜವಾದ ಕಳಕಳಿಯಿಂದ ಬೆಳೆಗಾರರ ಬಗ್ಗೆ ಶ್ರಮಿಸುತ್ತಿರುವ 'ಅಡಿಕೆ ಪತ್ರಿಕೆ'ಯ ಸಂಪಾದಕರಾದ 'ಶ್ರೀ' ಪಡ್ರೆ ಅವರನ್ನು ಕರೆಯಿಸಿ ಅವರಿಂದ 'ಕೃಷಿ ಪತ್ರಿಕೋದ್ಯಮ ತರಬೇತಿ ಶಿಬಿರ' ವನ್ನು ನಡೆಸಲು ತೀರ್ಮಾನಿಸಿದ್ದಾರೆ.

ಆ ಸಂಘಕ್ಕೆ ಭುಜಕ್ಕೆ ಭುಜ ಕೊಟ್ಟು ಸಹಾಯ ಮಾಡಲು ಅನೇಕ ಸಂಘ-ಸಂಸ್ಥೆಗಳು ಮುಂದಾಗಿವೆ. ಇಂತಹ ಶಿಬಿರ ನಡೆಸುವ ಸಾಹಸಕ್ಕೆ ಕೈ ಹಾಕಿರುವ ಈ ಸಂಘ ಸಂಸ್ಥೆಗಳ ಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಇದೇ ರೀತಿ, ಅಡಿಕೆ ಬೆಳೆಗಾರರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಬೆಳೆಗಾರರ ಹಿತಾಸಕ್ತಿಗಳನ್ನು ಗಮನಿಸುತ್ತಿರುವ 'ಅಡಿಕೆ ಪತ್ರಿಕೆ'ಯ ಸಂಪಾದಕರಾದ ಉತ್ಸಾಹಿ ಯುವಕರಾದ, 'ಶ್ರೀ' ಪಡ್ರೆ ಅವರನ್ನು ನಮ್ಮ ತಾಲ್ಲೂಕಿನ 'ಅಡಿಕೆ ಬೆಳೆಗಾರರ ಸಂಘ'ದವರೂ ಕರೆಯಿಸಿ ಅವರ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುವ ವ್ಯವಸ್ಥೆ ಮಾಡಿ ಕೊಡಬಹುದೆ?

—ಎಸ್. ಸಿ. ಭಾಸ್ಕರರಾವ್,
ಸಿರಿಮನೆ, ಶೃಂಗೇರಿ ತಾ॥

ಪ್ರಮಾದಕ್ಕೆ ವಿಷಾದ

ದಿನಾಂಕ. 15–7–90ರ 'ಮುಂಜಾವು' ಪತ್ರಿಕೆಯಲ್ಲಿ ಪ್ರಕಟಗೊಂಡ "ಕೊಪ್ಪ ಜೀವವಿಮಾ ಶಾಖೆಯ ಪ್ರಗತಿ" ಎಂಬ ಸುದ್ದಿಯಲ್ಲಿ ಶಾಖೆಯ ಪ್ರಾರಂಭದಿಂದಲೂ ಇರುವ ಅಭಿವೃದ್ಧಿ ಅಧಿಕಾರಿಗಳಾದ ಕರುಣಾಕರ್ ಶೆಟ್ಟಿ, ಚಂದ್ರಶೇಖರ್ ಮತ್ತು ಉಮೇಶ್ ವಾರಂಬಳ್ಳಿ ಇವರುಗಳ ಹೆಸರು ಪ್ರಮಾದವಶಾತ್ ಕೈ ಬಿಟ್ಟಿರುವುದಕ್ಕೆ ವಿಷಾದಿಸುತ್ತ, ಅವರ ಸೇವೆಯೂ ಸಹ ಶಾಖಾ ಪ್ರಗತಿಯಲ್ಲಿ ಗಣನೀಯವಾಗಿತ್ತೆಂಬುದನ್ನು ಇಲ್ಲಿ ಸ್ಮರಿಸುತ್ತೇನೆ.

—ಎಸ್. ಜಿ. ಕೃಷ್ಣಮೂರ್ತಿ,
ಅಧ್ಯಕ್ಷರು, ಜೀವವಿಮಾ ಪ್ರತಿನಿಧಿಗಳ ಸಂಘ, ಕೊಪ್ಪ.

ನಕ್ಕರೆ ಅದೇ ಸ್ವರ್ಗ

ಗುರುತು

ಪ್ರಯಾಣಿಕನೊಬ್ಬ ಕತ್ತಲಾಯಿತೆಂದು ...ಾರ್ಗದ ಮನೆಯೊಂದರಲ್ಲಿ ತಂಗಿದ. ಅಲ್ಲಿ ...ಷ್ಣ ಎಂಬ ಹುಡುಗನಿಗೆ ಬೆಳಗ್ಗೆ ತನ್ನ ...ಬೇಗನೇ ಎಬ್ಬಿಸುವಂತೆ ಹೇಳಿ ಗಾಢ ...ಗಿ ನಿದ್ದೆ ಹೋದ

...ಕೃಷ್ಣ ತುಂಟ. ಪ್ರಯಾಣಿಕನಿಗೆ ಎಚ್ಚರ ...ಗದಂತೆ ಅವನ ಗಡ್ಡ–ಮೀಸೆಗಳನ್ನು ...ರಿಯಿಂದ ಬೋಳಿಸಿಬಿಟ್ಟ. ಬೆಳಗ್ಗೆ ...ಗನೇ ಅವನನ್ನು ಎಬ್ಬಿಸಿದನು. ಗಡ...ಸಿ ಎದ್ದ ಅವನು ಮುಖ ತೊಳೆದು ...ಡಲನುವಾಗಿ ಕನ್ನಡಿಯ ಮುಂದೆ ...ಾಗ ತನ್ನ ಗುರುತೇ ಸಿಕ್ಕದಾಯಿತು. ...ಅವನು ಕೋಪದಿಂದ, "ನನ್ನನ್ನು ...ಕು ಎಂದರೆ ಯಾರನ್ನೋ ಎಬ್ಬಿಸಿ...ನೆ ದಡ್ಡ" ಎಂದುಕೊಳ್ಳುತ್ತ ಪುನಃ ...ಗಿ ನಿದ್ದೆ ಹೋದನು !

...ಗ್ರಹ : **ಕೆ.ಎಸ್.ಶೇಷಾಚಲರಾವ್,**
ಕುರುಕವಳ್ಳಿ.

ಹೊಸಬ

ಕುಡುಕರಿಬ್ಬರು ತಲೆತುಂಬುವಷ್ಟು ಕುಡಿದು ರಸ್ತೆ ಅಳೆಯುತ್ತಾ ಬರುತ್ತಿದ್ದರು. "ಚಂದ್ರ ಆಗ್ಲೇ ಮೇಲ್ ಬಂದವ್ನೆ. ಬೇಗ ಮನೀಗೆ ಹೋಗ್ಬೇಕು" ಅಂದ ಅವರಲ್ಲೊಬ್ಬ. ಇನ್ನೊಬ್ಬ ಒಪ್ಪದೆ "ಅದು ಚಂದ್ರ ಅಲ್ಲಾ ಕಣ್ಲಾ, ಸೂರ್ಯ" ಅಂದ.

ಅದು ಚಂದ್ರನೋ ಸೂರ್ಯನೋ ಎಂಬ ವಿವಾದ ವಿಕೋಪಕ್ಕೆ ಹೋಗುತ್ತಿರುವಷ್ಟರಲ್ಲಿ ಅದೇ ದಾರಿಯಲ್ಲಿ ಮತ್ತೊಬ್ಬ ಬರುವುದು ಕಂಡಿತು. ಇಬ್ಬರೂ ಸಮಾಧಾನಿಸಿ ಅವನನ್ನೇ ಕೇಳುವ ತೀರ್ಮಾನಕ್ಕೆ ಬಂದು, ಅವನೊಡನೆ, "ಮೇಲೆ ಕಾಣೋದು ಸೂರ್ಯನೋ ಚಂದ್ರನೋ ಒಸಿ ಹೇಳು" ಎಂದರು. ಆತ ಸ್ವಲ್ಪ ಹೊತ್ತು ಮೇಲೆ ದಿಟ್ಟಿಸಿ ನೋಡಿ, "ಏನೋ.... ನಂಗೊತ್ತಿಲ್ಲಪ್ಪ. ನಾ ಈ ಊರಿಗೆ ಹೊಸಬ" ಎನ್ನುತ್ತಾ ನಡೆದೇ ಬಿಟ್ಟ, ಇವರಿಗಿಂತ ಹೆಚ್ಚಿಗೆ ಕುಡಿದಿದ್ದ ಆತ.

ಸಂಗ್ರಹ :
ಗಣೇಶ್ ಮೂರ್ತಿ, ಹುಲುಗಾರು.

ನಿರ್ಜನ ಕತ್ತಲ ಜಾಗದಲ್ಲಿರುವ ಅಕ್ರಮ ಶರಾಬು ಅಂಗಡಿ ತೆರವಿಗೆ ಒತ್ತಾಯ

ಕೊಪ್ಪ : ರಾಘವೇಂದ್ರ ನಗರದ ಸಮೀಪ ಕೊಪ್ಪ–ನ.ರಾ ಪುರ ರಸ್ತೆಗೆ ಹೊಂದಿಕೊಂಡು ಈಚೆಗೆ ತಲೆ ಎತ್ತಿರುವ ಅನಧಿಕೃತ ಶರಾಬು ಅಂಗಡಿಯನ್ನು ಕೂಡಲೇ ಖುಲ್ಲಾ ಮಾಡಿಸಬೇಕೆಂದು ಗ್ರಾಮಸ್ಥರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ತಾತ್ಕಾಲಿಕ ಶೆಡ್ ಒಂದರಲ್ಲಿ ಶರಾಬು ಮಾರಾಟ ಪ್ರಾರಂಭಿಸಿರುವ ಈ ಜಾಗ ದಾರಿದೀಪವಿಲ್ಲದ ಕತ್ತಲೆಯ ನಿರ್ಜನ ಪ್ರದೇಶವಾಗಿದ್ದು, ಅಂಗಡಿಗೆ ಸಹ ದೀಪವಿಲ್ಲ ಹತ್ತಿರದಲ್ಲೇ ಜನನಿಬಿಡ ರಾಘವೇಂದ್ರ ನಗರವಿರುವುದಲ್ಲದೆ, ಕೊಪ್ಪ ಎಸ್ಟೇಟ್', ಹಂದಿಗೋಡು, ಬಲಗಾರು ಮುಂತಾದ ಕಡೆಗಳಿಗೆ ಹೋಗುವ ನೂರಾರು ಜನ ಈ ದಾರಿಯಲ್ಲಿ ಓಡಾಡುತ್ತಾರೆ. ಈ ಪ್ರದೇಶಗಳ ಕೃಷಿ ಕಾರ್ಮಿಕ ಮಹಿಳೆಯರು ದಿನದ ಕೆಲಸ ಮುಗಿಸಿ, ತುರ್ತಿನ ದಿನಬಳಕೆ ವಸ್ತುಗಳನ್ನು ಕೊಳ್ಳಲು ಕೊಪ್ಪ ಪೇಟೆಗೆ ಹೋಗಿ ಬರುವ ಮಾರ್ಗವೂ ಇದಾಗಿದ್ದು, ಇಂಥ ಆಯಕಟ್ಟಿನ ನಿರ್ಜನ ಪ್ರದೇಶದಲ್ಲಿ, ಅದೂ ಕತ್ತಲಲ್ಲಿ ನಡೆಯುವ ಈ ಶರಾಬು ಅಂಗಡಿಯಿಂದ ಎಲ್ಲ ರೀತಿಯ ಅನರ್ಥಗಳಿಗೂ ಆಸ್ಪದವಿರುವುದರಿಂದ ಇದನ್ನು ಕೂಡಲೇ ತೆರವು ಮಾಡಿಸಬೇಕೆಂದು ಮನವಿದಾರರು ವಿವರಿಸಿದ್ದಾರೆ

ಈ ಅಂಗಡಿ ತೆರವು ಮಾಡಿಸಬೇಕೆಂದು ಈಗಾಗಲೇ ಗುರ್ಜರ್‌ರವರು ಸಹ ಸಂಬಂಧಪಟ್ಟ ಅಧಿಕಾರಿಗಳನ್ನೂ ಹರಂದೂರು ಮಂಡಲ ಪಂಚಾಯ್ತಿಯವರನ್ನೂ ಒತ್ತಾಯಿಸಿರುವುದಾಗಿ ಗೊತ್ತಾಗಿದೆ.

ನಂದಿನಿ ಸೇತುವೆಯ ತಡೆಗೋಡೆ ಒಂದೇ ಮಳೆಗೆ ಕುಸಿದುದರ ನೈತಿಕ ಹೊಣೆ ಹೊತ್ತು
ಮರ್ಕಲ್ ಮಂಡಲಪ್ರಧಾನ, ಉಪಪ್ರಧಾನರು ರಾಜೀನಾಮೆ ನೀಡಲಿ

ಪ್ರಿಯರೆ,

ದಿನಾಂಕ 24-6-90ರ 'ಮುಂಜಾವು' ನಲ್ಲಿ ಪ್ರಕಟವಾದ "ಜಿ.ಪ. ಇಂಜಿನಿಯರ್ ಉದ್ಧಟತನ" ಎಂಬ ವರದಿಯಲ್ಲಿರುವ ವಿಷಯ ಸಂಪೂರ್ಣ ಸತ್ಯವೆಂದು ನನ್ನ ಅವಗಾಹನೆಗೆ ಬಂದಿದೆ. ನಂದಿನಿ ನದಿಗೆ ನಿರ್ಮಿಸಿದ ದೋಣಾರು ಸೇತುವೆಯ ತಡೆಗೋಡೆಯಂತಹುದೇ ಅನೇಕ ಹಣ ನುಂಗುವ ಕಾಮಗಾರಿಗಳನ್ನು ಮರ್ಕಲ್ ಮಂಡಲದ ಪ್ರಧಾನರು, ಉಪ ಪ್ರಧಾನರುಗಳು ತಮ್ಮ ಪಕ್ಷದವರಾದ ಜನನುಭವಿ ಕಂಟ್ರಾಕ್ಟರುಗಳಿಗೆ ನೀಡುತ್ತಿರುವುದು ಸರ್ವವಿದಿತವಾಗಿದೆ.

ದೋಣಾರು ಸೇತುವೆ ತಡೆ ಗೋಡೆ ನಿರ್ಮಿಸಿದ ಕಂಟ್ರಾಕ್ಟರ್ ಸಿಮೆಂಟಿನ ಬದಲಿಗೆ 'ರಾಕ್ ಫಾಸ್ಫೇಟ್' ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿದ್ದಾರೆಂಬ ಬಲವಾದ ಗುಮಾನಿ ಗ್ರಾಮಸ್ಥರಿಗಿತ್ತು. (ಅದಕ್ಕೆ ಸಿಮೆಂಟಿನಂತಹುದೇ ಬಣ್ಣ ಹಾಗು ಸ್ವಲ್ಪ ಅಂಟು ಕೂಡ ಇರುತ್ತದೆ. ಆದರೆ ನೀರು ಬಿದ್ದರೆ ಕರಗುವುದು) ಆದ್ದರಿಂದಲೇ ಮಳೆಯ ನೀರು ಹೆಚ್ಚಾದಾಗ ಗೋಡೆ ಸಹಜವಾಗಿಯೇ ಕುಸಿದಿರಬೇಕೆನ್ನಿಸುತ್ತದೆ.

ಈ ಬಗ್ಗೆ ಏಪ್ರಿಲ್ ತಿಂಗಳ ಗ್ರಾಮಸಭೆಯಲ್ಲಿ ಜಿ. ಪ. ಇಂಜಿನಿಯರ್ ಹಾಗೂ ಮಂಡಲದ ಪ್ರಧಾನರು-ಉಪ ಪ್ರಧಾನರು, ಸದಸ್ಯರೆಲ್ಲರಿಗೂ ಗ್ರಾಮಸ್ಥರು ದೂರಿತ್ತಾಗ, ಜಿ.ಪ. ಇಂಜಿನಿಯರ್‌ರವರು ಬಾಯಿಗೆ ಬಂದಂತೆ ಮಾತನಾಡಿದರು. ಪ್ರಧಾನರು-ಉಪ ಪ್ರಧಾನರು ಸ್ಮಶಾನ ಮೌನ ತಾಳಿದರು (ಕಾರಣ ಕಂಟ್ರಾಕ್ಟರ್ ಅವರ ಪಕ್ಷದವರು) ಇಂತಹ ನೂರಾರು ಜನರಿಗೆ ತೊಂದರೆಯಾಗುವುದನ್ನು ಅಥವಾ ಸರ್ಕಾರದ್ದ ಹಣ ಪೋಲು ಆಗುವುದನ್ನು ಗಮನಿಸಲು, ಅದರ ಬಗ್ಗೆ ಕ್ರಮ ಕೈಗೊಳ್ಳಲು ಇವರಿಗೆ ಸಮಯವಿಲ್ಲ. ಏಕೆಂದರೆ ಯಾರದ್ದೋ ಖಾಸಗಿ ನೀರಿಲ್ಲದ ಬಾವಿಗೆ ಕಟ್ಟೆ ನಿರ್ಮಿಸುವುದರಲ್ಲೋ, 400 ರೂಪಾಯಿಯ ನಲ್ಲಿ ಕಟ್ಟೆಯನ್ನು 100 ರೂಪಾಯಿಗೆ ಕಟ್ಟಿಸುವುದರಲ್ಲೋ.... ಇಂಥವುಗಳಲ್ಲೇ ಸಮಯ ಕಳೆಯುತ್ತಿದೆ.

ಇಂತಹ ಕಳಪೆ ಕಾಮಗಾರಿ ನಡೆಯುತ್ತಿರುವುದರ ಬಗ್ಗೆ ಗ್ರಾಮಸ್ಥರು ಮೊದಲೇ ಎಚ್ಚರಿಸಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದ ಮಂಡಲ ಪ್ರಧಾನರು, ಉಪ ಪ್ರಧಾನರೇ ತಡೆ ಗೋಡೆ ಕುಸಿತದ ಈ ದುರಂತಕ್ಕೆ ಕಾರಣರಾಗಿದ್ದಾರೆ. ಅವರು ನೈತಿಕ ಜವಾಬ್ದಾರಿ ಹೊತ್ತು ತಮ್ಮ ಸ್ಥಾನಕ್ಕೆ ಈ ಕೂಡಲೆ ರಾಜೀನಾಮೆ ನೀಡಲಿ ಮುಂದಾದರೂ ಇಂತಹ ನೀಚ ಕಾರ್ಯಗಳು ನಡೆಯುವುದು ತಪ್ಪಬಹುದು.

—ರಾಜಶೇಖರ್, ಕಿಗ್ಗ

ಒಂದು ಕರೆ

ಮಾನವೀಯ ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯ, ವಿಜ್ಞಾನ-ಈ ಪ್ರಮುಖ ಅಂಶಗಳಲ್ಲಿ ಒಂದಾದರೂ ಪ್ರತಿ ಮಾನವನಲ್ಲಿ ಇದ್ದೇ ಇರುತ್ತದೆ. ಇಂಥ ಆಸಕ್ತರ ಸಂಘಟನೆಗಾಗಿ 'ಪರಿಶ್ರಮ ಕೇಂದ್ರ'ವು ಪ್ರಯತ್ನಿಸುತ್ತಿದೆ.

ತಮ್ಮಲ್ಲಿದ್ದ ಪ್ರತಿಭೆ-ಪ್ರೌಢಿಮೆಗಳನ್ನು, ಸೇವಾ-ಭಾವನೆಯಿಂದ ರಾಜಕೀಯ ಮತ್ತು ಜಾತೀಯತೆಯಿಂದ ಮುಕ್ತವಾಗಿ ಸಾಮಾಜಿಕ ಏಳಿಗೆಗಾಗಿ ವಿನಿಯೋಗಿಸ ಬಯಸುವ ಯುವಜನರು, ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ಸಂಚಾಲಕ, 'ಪರಿಶ್ರಮ ಕೇಂದ್ರ', ಅರಸಿತೋಟ ಕಲ್ಕೆರೆ ಅಂಚೆ, ಕೊಪ್ಪ ಚಿಕ್ಕಮಗಳೂರು.

ನಿರ್ಲಜ್ಜ, ಭ್ರಷ್ಟ ಇಂಜಿನಿಯರ್‌ಗೆ ಶಿಕ್ಷೆಯೇ ಇಲ್ಲವೆ ?

ಪ್ರಿಯರೆ,

ನಿಮ್ಮ ಪತ್ರಿಕೆಯ 24-6-90ರ ಸಂಚಿಕೆಯ 'ಓದುಗರ ಪತ್ರ'ದಲ್ಲಿ ಪ್ರಕಟವಾಗಿರುವಂತೆ, ಶೃಂಗೇರಿಯ ಜಿ. ಪ. ಇಂಜಿನಿಯರರ ಉದ್ಧಟತನ, ಭ್ರಷ್ಟತೆಗಳಿಂದಾಗಿ ಮರ್ಕಲ್ ಮಂಡಲದ ದೋಣಾರು ಮತ್ತು ಸುತ್ತಮುತ್ತಲ ಗ್ರಾಮಗಳವರ ಸ್ಥಿತಿ "ಗಂಡ ಸತ್ತ ದುಃಖವೊಂದು ಕಡೆ, ಮೊಂಡು ಕತ್ತಿ ಉರಿ ಒಂದು ಕಡೆ" ಎಂಬಂತಾಗಿದೆ. ಬದಿಯಕಾಲುವೆ (ಚರಂಡಿ) ಗಳಿಲ್ಲದೆ ರಸ್ತೆಗಳು ಕೊಚ್ಚಿ ಹೋಗಿರುವುದು ಒಂದು ಕಡೆಯಾದರೆ, ಈ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಯನ್ನು ಹೊಳೆ ದಾಟಿ ಹತ್ತಬೇಕಾದಂಥ ದುರಂತ ಇನ್ನೊಂದು ಕಡೆ

ಸದರಿ ಪತ್ರದಲ್ಲಿ ತಿಳಿಸಿರುವಂತೆ, ಗ್ರಾಮ ಸಭೆಯಲ್ಲಿ ಜಿ. ಪ. ಇಂಜಿನಿಯರ್ ನಿರ್ಲಜ್ಜವಾಗಿ ಮತ್ತು ಉದ್ಧಟತನದಿಂದ ಗ್ರಾಮಸ್ಥರೊಂದಿಗೆ ವಾಗ್ವಾದ ಮಾಡಿದ್ದು ನಿಜ.

ಅಂದು, "ಒಂದು ಕಲ್ಲು ಹೋದರೆ ಎರಡು ಕಲ್ಲು ಹಾಕಿ ಕಟ್ಟಿಸುತ್ತೇನೆ" ಎಂದಿದ್ದ ಈ ಮನುಷ್ಯ ಈಗ ಪುನಃ ಕಲ್ಲು ತಂದು ಕಟ್ಟಿ (ತಡೆಗೋಡೆ) ಕಟ್ಟಿಸುತ್ತಾರೋ ಅಥವಾ ಈ ಸೇತುವೆಯನ್ನೇ ನಂಬಿದವರ ತಲೆಯ ಮೇಲೇ ಕಲ್ಲು ಹಾಕುತ್ತಾರೋ-ಕೇಳ ಬೇಕಾಗಿದೆ.

ಅಂದಿನ ಸಭೆಯಲ್ಲಿ ಸದರಿ ಕಳಪೆ ಕಾಮಗಾರಿ ನಿರ್ವಹಿಸಿದ ಕಂಟ್ರಾಕ್ಟರು ತಮ್ಮ ಪಕ್ಷದವನೆಂಬ ಒಂದೇ ಕಾರಣಕ್ಕೆ, ಗ್ರಾಮದ ಹಿತವನ್ನು ಬದಿಗಿಟ್ಟು ಮೌನ ತಳೆದ ಪ್ರಧಾನ-ಉಪ ಪ್ರಧಾನರು ತಮ್ಮನ್ನು ಚುನಾಯಿಸಿದವರು ತಲೆ ತಗ್ಗಿಸುವಂತೆ ಮಾಡಿದ್ದಾರೆ.

ಈ ತಡೆ ಗೋಡೆ ಎಷ್ಟು ಭದ್ರವಾಗಿದೆ ಎಂದು ತನಗೆ ಗೊತ್ತು ಎಂದು ಜಬರ್ದಸ್ತು ಮಾಡಿದ್ದ ಈ ಇಂಜಿನಿಯರ್ ಜೇಬು ಎಷ್ಟು ಭದ್ರವಾಗಿ ತುಂಬಿತು ಎಂಬುದನ್ನು ಕುಸಿದು ಬಿದ್ದ ತಡೆಗೋಡೆಯೇ ಸಾಬೀತು ಮಾಡುತ್ತಿದೆ. ಸರ್ಕಾರದ ಹಣವನ್ನು ಹೀಗೆ ಲೂಟಿ ಮಾಡಿ, ಯೋಜನೆಗಳ ಪ್ರಯೋಜನ ಗ್ರಾಮಾಂತರಗಳಿಗೆ ದಕ್ಕದಂತೆ ಮಾಡುವ ಇಂಥ ಧನ ಪಿಶಾಚಿ ಇಂಜಿನಿಯರ್, ಕಂಟ್ರಾಕ್ಟರ್‌ಗಳನ್ನು ಕೇಳುವವರು ಯಾರೂ ಇಲ್ಲವೆ? ಇವರಿಗೆ ಶಿಕ್ಷೆಯೇ ಇಲ್ಲವೇ?

—ನೊಂದ ಗ್ರಾಮಸ್ಥರು,
(14 ಮಂದಿಯ ಸಹಿಗಳಿವೆ)

[24-6-90ರ ಸಂಚಿಕೆಯನ್ನು ಜಿ.ಪ. ಅಧ್ಯಕ್ಷ ಬಿ. ಎಲ್. ರಾಮದಾಸ್ ಹಾಗೂ ಮುಖ್ಯ ಕಾರ್ಯದರ್ಶಿ ಮತ್ತು ಜಿ.ಪ. ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಮುದ್ದಾಂ ಕಳಿಸಲಾಗಿದೆ. ಆದರೆ ಅವರ್ಯಾರಿಂದಲೂ ಉತ್ತರ ಬಂದಿಲ್ಲ. ಕ್ರಮವನ್ನೂ ಕೈಗೊಂಡಿಲ್ಲವೆಂದರೆ, ಗ್ರಾಮಸ್ಥರು ಹೇಳಿದಂತೆ, ಇವರೆಲ್ಲ ವಿಚಾರಣೆ ಶಿಕ್ಷೆಗಳಿಗೆ ಅತೀತರೆನ್ನಿಸುತ್ತದೆ. —ಸಂ]

ಸೋರುವ ತಾರಸಿಯ ಮೇಲೊಂದು ಚಾಟು-ಮಾಡು

ಕಲ್ಕೆರೆ : ಇಲ್ಲಿರುವ ತುಳುವಿನಕೊಪ್ಪ ಮಂಡಲದ ಕೃಷಿ ಸಹಾಯಕರ ವಸತಿ ಗೃಹದ ತಾರಸಿ ಎಲ್ಲೆಡೆ ಸೋರುತ್ತಿದ್ದು, ಅಲ್ಲಿ ವಾಸಿಸುವುದೇ ಅಸಾಧ್ಯವಾಗಿದೆ. ತಾತ್ಕಾಲಿಕವಾಗಿ ಸ್ಥಳೀಯ ರೈತರ ನೆರವಿನಿಂದ ತಾರಸಿಯ ಮೇಲೆ ಒಂದು ಚಾಟು ನಿರ್ಮಿಸಿ, ಹುಲ್ಲು, ಸೋಗೆ, ಸೊಪ್ಪುಗಳಿಂದ ಮಾಡು ನಿರ್ಮಿಸಲಾಗಿದ್ದು, ರಸ್ತೆಯಲ್ಲಿ ಓಡಾಡುವವರಿಗೊಂದು ಮೋಜಿನ ದೃಶ್ಯವಾಗಿದೆ.

ಡ್ರೈವಿಂಗ್ ಲೈಸೆನ್ಸ್ ಇಲ್ಲದ ಎಳೆಯರು ರಿಕ್ಷಾ ಬಿಡುವುದು, ವಿಪರೀತ ಬಾಡಿಗೆ: ದೂರು

ಕೊಪ್ಪ : ಇಲ್ಲಿನ ಹಲವಾರು ಆಟೋ ರಿಕ್ಷಾಗಳವರು ಹೊಸಬರಿಂದ ಯದ್ವಾತದ್ವಾ ಬಾಡಿಗೆ ಕೇಳುತ್ತಿದ್ದಾರೆ; ಮೇಲಿನಪೇಟೆಗೆ 6 ರೂ. ಬಾಳಗಡಿಗೆ 8ರಿಂದ 10 ರೂ. ವಸೂಲು ಮಾಡುತ್ತಾರೆ. ಎಳೆಯ ಶಾಲಾ ಮಕ್ಕಳಂಥ ಹುಡುಗರೆಲ್ಲ ಆಟೋ ಓಡಿಸುತ್ತಾರೆ. ಇವರಿಗೆ ಲೈಸೆನ್ಸ್, ತರಬೇತಿ ಎಲ್ಲ ಯಾರು ಕೊಡುತ್ತಾರೋ ಗೊತ್ತಿಲ್ಲ. ಇವರು ಪ್ರಯಾಣಿಕರನ್ನು ಹೊಂಡಕ್ಕೆ ಹಾಕುವ ಭಯ ಯಾವಾಗಲೂ ಕಾಡುತ್ತಿದೆ- ಎಂಬುದಾಗಿ ಕೊಪ್ಪದ ಗ್ರಾಹಕರೊಬ್ಬರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದೂರಿತ್ತಿದ್ದಾರೆ

ಇಂಥ ಲೈಸೆನ್ಸ್ ಇಲ್ಲದ ಅನನುಭವಿಗಳು ರಿಕ್ಷಾ ಓಡಿಸದಂತೆ ಕ್ರಮ ಕೈಗೊಳ್ಳುವುದಲ್ಲದೆ, ಬಾಡಿಗೆ ಬಗ್ಗೆ ನಿಯಂತ್ರಣ ವಿಧಿಸಿ ದರ ನಿಗದಿ ಮಾಡುವಂತೆಯೂ ಅವರು ಒತ್ತಾಯಿಸಿದ್ದಾರೆ.

ಈ ಬಗ್ಗೆ ಕೊಪ್ಪದ ಕೆಲವು ಮಂದಿ ಪ್ರಮುಖ ಆಟೋ ರಿಕ್ಷಾ ಡ್ರೈವರ್‌ಗಳ ಜೊತೆ ವಿಚಾರಿಸಿದಾಗ, ಬಾಡಿಗೆಯನ್ನು ಸಾಮಾನ್ಯವಾಗಿ ಯಾರೂ ಯದ್ವಾತದ್ವಾ ಕೇಳುವುದಿಲ್ಲ. ಹಾಗೊಂದು ವೇಳೆ ಅತಿ ಅನ್ನಿಸಿದಾಗ ಪೋಲೀಸ್ ಠಾಣೆಗೆ ದೂರು ನೀಡಬಹುದು ಎಂದಿದೆ. ನೇರವಾಗಿ ದೂರು ನೀಡಲಿ. ಹೀಗೆ ಸಾರಾಸಗಟಾಗಿ ಆರೋಪಿಸಿದರೆ, ನ್ಯಾಯವಾಗಿ ನಡೆದು ಕೊಳ್ಳುತ್ತಿರುವವರಿಗೆಲ್ಲ ನೋವಾಗುತ್ತದೆ ಎನ್ನುತ್ತಾರೆ.

ಚಾಲನೆ ಲೈಸೆನ್ಸ್ ಹಾಗೂ ತರಬೇತಿ ಇಲ್ಲದ ಕೆಲವರು ರಿಕ್ಷಾ ಓಡಿಸುತ್ತಿರುವುದು ನಿಜವಿರಬಹುದು, ಅಂಥವರ ಮೇಲೆ ಕ್ರಮ ಕೈಗೊಂಡರೆ ಆಕ್ಷೇಪವಿಲ್ಲ ಎಂದೂ ಹೇಳುತ್ತಾರೆ.

ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ವಿದ್ಯಾರ್ಥಿಗಳ 'ಚಿಂತನ ಚಿಲುಮೆ' ಉದ್ಘಾಟನೆ

ಶೃಂಗೇರಿ : ವಿದ್ಯಾರ್ಥಿಗಳ ವೈಚಾರಿಕ ಚಿಂತನೆಗೆ ಅನುವು ಮಾಡಿ ಕೊಡುವ ಉದ್ದೇಶ ಹೊಂದಿರುವ 'ಚಿಂತನ ಚಿಲುಮೆ' (ಥಿಂಕ್ ಟ್ಯಾಂಕ್) ಎನ್ನುವ ಹೊಸ ಕಾರ್ಯಕ್ರಮವೊಂದನ್ನು ಇಲ್ಲಿನ ಜೆ. ಸಿ. ಬಿ. ಎಂ. ಕಾಲೇಜಿನಲ್ಲಿ ಈಚೆಗೆ ಆರಂಭಿಸಲಾಯಿತು ಕಾಲೇಜಿನ ಎನ್ ಎಸ್ ಎಸ್ ವಿಚಾರ ವೇದಿಕೆಯ ಸಹಕಾರದೊಡನೆ. ಇಂಗ್ಲಿಷ್ ಉಪನ್ಯಾಸಕ ಹೆಯವದನ ಉಪಾಧ್ಯರವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಸಂಯೋಜಿಸಲಾಗಿದೆ.

ಉದ್ಘಾಟನೆ ಮಾಡಿದ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಟಿ. ಎಸ್. ವೆಂಕ[illegible]ಯ್ಯನವರು, ವಿದ್ಯಾರ್ಥಿಗಳು ಅಂಧ ಶ್ರದ್ಧೆ ಮತ್ತು ಮೌಢ್ಯ ತೊರೆದು ವೈಚಾರಿಕತೆ ಬೆಳೆಸಿಕೊಳ್ಳುವುದರೊಡನೆ, ತಮ್ಮ ವ್ಯಕ್ತಿತ್ವವನ್ನು ತಾವೇ ರೂಪಿಸಿಕೊಳ್ಳುವಂತೆ ಕರೆ ನೀಡಿದರು ಕನ್ನಡ ಉಪನ್ಯಾಸಕ ಕೆ. ಪುಟ್ಟಯ್ಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ಮೊದಲಿಗೆ ಸ್ವಾಗತಿಸಿದ ಹೆಯವದನ ಉಪಾಧ್ಯ, 'ಚಿಂತನ ಚಿಲುಮೆ'ಯ ರೂಪುರೇಷೆ ಮತ್ತು ಅದರ ಉದ್ದೇಶಗಳನ್ನು ವಿವರಿಸಿದರು. ಎನ್ ಎಸ್.ಎಸ್. ಶಿಬಿರದ ಅಧಿಕಾರಿಗಳಾದ ವೀರಪ್ಪಗೌಡ ವಂದಿಸಿದರು.

ಯಾವುದೇ ರೀತಿಯ ಸಾಂಪ್ರದಾಯಿಕ ಆಡಂಬರವಿಲ್ಲದೆ ಕಾರ್ಯಕ್ರಮ ಸರಳವಾಗಿ ನಡೆಯಿತು.

(ವರದಿ : 'ಶೃಂಗಿ', ಶೃಂಗೇರಿ)

ಕೊಪ್ಪದಲ್ಲಿ ಕೃಷಿ ಪತ್ರಿಕೋದ್ಯಮ ತರಬೇತಿ ಶಿಬಿರ

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ-ಶಿವಮೊಗ್ಗ (ಮ್ಯಾಮ್ಕೋಸ್), ಚಿಕ್ಕಮಗಳೂರು ಜಿಲ್ಲಾ ಅಡಿಕೆ ಬೆಳೆಗಾರರ ಸಂಘ-ಕೊಪ್ಪ, ಕೃಷಿ ವಿಚಾರ ವಿನಿಮಯ ಕೇಂದ್ರ-ಕೊಪ್ಪ, ಸಿಂಡಿಕೇಟ್ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ-ಹಿರಿಯಡ್ಕ ಮತ್ತು ಕೊಪ್ಪದ ಜೂನಿಯರ್ ಚೇಂಬರ್ ಮತ್ತಿತರ ಸಂಸ್ಥೆಗಳ ಸಹಯೋಗದೊಂದಿಗೆ "ಅಡಿಕೆ ಪತ್ರಿಕೆ" ಸೆಪ್ಟೆಂಬರ್ 13ರಿಂದ 16ರವರೆಗೆ ಕೊಪ್ಪದಲ್ಲಿ ಆಸಕ್ತ ಕೃಷಿಕ ಯುವಕ-ಯುವತಿಯರಿಗಾಗಿ ನಾಲ್ಕು ದಿನಗಳ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತರಬೇತಿ ಶಿಬಿರವನ್ನು ನಡೆಸಲಿದೆ.

"ಕೃಷಿಕರ ಕೈಗೆ ಲೇಖನಿ" ಎಂಬ ಉದ್ದೇಶ ಹೊತ್ತ ಈ ಶಿಬಿರ ಹವ್ಯಾಸಕ್ಕಾಗಿ ಕೃಷಿ ಮತ್ತು ಗ್ರಾಮೀಣ ವಿಷಯಗಳ ಮೇಲೆ ಲೇಖನ ಬರೆಯಲು ಆಸಕ್ತ ತರುಣ-ತರುಣಿಯರಿಗೆ ಪತ್ರಿಕೋದ್ಯಮದ ತಿಳುವಳಿಕೆಯನ್ನು ನೀಡಲಿದೆ. ಶಿಬಿರಕ್ಕಾಗಿ ಅಭ್ಯರ್ಥಿಗಳು ಶುಲ್ಕ ತೆರಬೇಕಾಗಿಲ್ಲ. ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಅಭ್ಯರ್ಥಿಗಳಿಗೆ ಆದ್ಯತೆ. ಉಳಿದ ಜಿಲ್ಲೆಯ ಕೃಷಿಕರೂ ಅರ್ಜಿ ಹಾಕಿಕೊಳ್ಳಬಹುದು. ಆಯ್ದ 25ರಿಂದ 30 ಮಂದಿಗೆ ಅವಕಾಶ.

ಆಸಕ್ತರು "ತರಬೇತಿ ಶಿಬಿರ—1990, ಅಡಿಕೆ ಪತ್ರಿಕೆ, ಅಂಚೆ ಪೆಟ್ಟಿಗೆ ನಂ 29, ಪುತ್ತೂರು, ದ.ಕ" ಇಲ್ಲಿಗೆ ಪತ್ರ ಬರೆದು ನಿಗದಿತ ಅರ್ಜಿ ಫಾರಂ ತರಿಸಿ ಅರ್ಜಿ ಹಾಕಿಕೊಳ್ಳಬಹುದು. ಅರ್ಜಿಗಳು ಪುನಃ ಕಚೇರಿಗೆ ತಲುಪಲು ಕೊನೆಯ ದಿನಾಂಕ 22-8-1990.

ಮಂಗಳೂರಿನ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಆಶ್ರಯದಲ್ಲಿ ಕಳೆದ ವರ್ಷ ಅಡಿಕೆ ಪತ್ರಿಕೆ ಕಾಸರಗೋಡು ಜಿಲ್ಲೆಯ ನೀರ್ಚಾಲಿನಲ್ಲಿ ಕಾಸರಗೋಡು ಮತ್ತು ದ.ಕ. ಜಿಲ್ಲೆಯ ಅಭ್ಯರ್ಥಿಗಳಿಗಾಗಿ ಇಂತಹದೇ ನಾಲ್ಕು ದಿನಗಳ ಶಿಬಿರ ನಡೆಸಿದುದನ್ನು ಇಲ್ಲಿ ಸ್ಮರಿಸಬಹುದು.

ಸಬ್‌ಇನ್‌ಸ್ಪೆಕ್ಟರ್ ಪಾಪಯ್ಯ ಅವರಿಗೆ ಬೀಳ್ಕೊಡುಗೆ

ಶೃಂಗೇರಿ: ಇಲ್ಲಿ ಪೋಲೀಸ್ ಸಬ್‌ಇನ್‌ಸ್ಪೆಕ್ಟರಾಗಿ 3 ವರ್ಷ ಕಾರ್ಯ ನಿರ್ವಹಿಸಿ ಬೇರೆಡೆಗೆ ವರ್ಗವಾಗಿರುವ ಜೆ. ಪಾಪಯ್ಯ ಅವರನ್ನು ಇಲ್ಲಿನ ಪೋಲೀಸ್ ಸಿಬ್ಬಂದಿ ಕರಿಯಪ್ಪ ಅವರ ಅಧ್ಯಕ್ಷತೆಯಲ್ಲಿ ನೆನಪಿನ ಕಾಣಿಕೆ ನೀಡಿ ಬೀಳ್ಕೊಟ್ಟರು. ಪಾಪಯ್ಯ ಕೃತಜ್ಞತೆ ಸಲ್ಲಿಸಿದರು. ನೂತನ ಸಬ್‌ಇನ್‌ಸ್ಪೆಕ್ಟರ್ ಮರಿಗೌಡ ಅವರನ್ನು ಇದೇ ಸಂದರ್ಭದಲ್ಲಿ ಸ್ವಾಗತಿಸಲಾಯಿತು. ಸಿಬ್ಬಂದಿಗಳ ಪರವಾಗಿ ಜಯಕರ್ ಮಾತನಾಡಿದರು. ಗುರುಶಾಂತಪ್ಪ ಸ್ವಾಗತಿಸಿ, ವಂದಿಸಿದರು.

(ವರದಿ: ಪಿ.ಎಂ. ಮರುಳಪ್ಪ.)

ರೋಟರಿಯಿಂದ ಪ್ರತಿಭಾವಂತ ವಿದ್ಯಾರ್ಥಿನಿಗೆ ಸನ್ಮಾನ

ಕೊಪ್ಪ : ಇಲ್ಲಿನ ಸಂತ ಜೋಸೆಫ್ ಪ್ರೌಢಶಾಲೆಯ ವಿದ್ಯಾರ್ಥಿನಿಯಾಗಿದ್ದು, ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ಸಿ. ಕೆ. ಶರ್ಮಿಳಾಳನ್ನು ಇಲ್ಲಿನ ರೋಟರಿ ಕ್ಲಬ್ ಈಚೆಗೆ ಸನ್ಮಾನಿಸಿತು. ಶರ್ಮಿಳಾ ಗುಬ್ಬಗದ್ದೆ ಅರಣ್ಯ ರಕ್ಷಣಾ ಹೋರಾಟ ಸಮಿತಿಯ ಸಕ್ರಿಯ ಸದಸ್ಯರಾದ ಸಿ. ಎಂ. ಕೃಷ್ಣರಾವ್ ಅವರ ಮಗಳು. ಈಕೆ ಬಹುಮುಖ ಪ್ರತಿಭಾವಂತೆಯೂ ಹೌದು.

ಬಿಳಾಲ್‌ಕೊಪ್ಪ ಕೃ.ವಿ.ವಿ. ಕೇಂದ್ರಕ್ಕೆ ಮತ್ತೆ ಪ್ರಶಸ್ತಿ

ಬಿಳಾಲುಕೊಪ್ಪ : ಬಸರಿಕಟ್ಟೆ ಸಿಂಡಿಕೇಟ್ ಬ್ಯಾಂಕ್ ಆಶ್ರಯದ ಇಲ್ಲಿನ ಕೃಷಿ ವಿಚಾರ ವಿನಿಮಯ ಕೇಂದ್ರ 1989-90 ರಲ್ಲಿ ದೇಶದಲ್ಲಿಯೇ 3 ನೆಯದಾದ ಉತ್ತಮ ಕೇಂದ್ರವೆಂದು ಪ್ರಶಸ್ತಿ ಪಡೆದಿದೆ. ಈ ಕೇಂದ್ರಕ್ಕೆ ಈ ಪ್ರಶಸ್ತಿ ಬರುತ್ತಿರುವುದು ಇದು 3ನೇ ಬಾರಿಯಾಗಿದೆ.

ನೂತನ ಪದಾಧಿಕಾರಿಗಳು

ಕಳೆದ ಸಾಲಿನ ಅಧ್ಯಕ್ಷ ಬಿ. ವಿ. ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೂತನ ಕಾರ್ಯಕಾರಿ ಮಂಡಲಿ ಆಯ್ಕೆಯಾಗಿದೆ. ಬಿ. ಎನ್. ವೆಂಕಟರಮಣ (ಅಧ್ಯಕ್ಷರು), ಬಿ. ಎನ್. ಶಿಂಗಪ್ಪಯ್ಯ ಮತ್ತು ಬಿ. ಟಿ. ವೆಂಕಟೇಶ್ (ಉಪಾಧ್ಯಕ್ಷರು), ಕೆ. ವಿ. ವಿಜಯರಂಗ (ಕಾರ್ಯದರ್ಶಿ), ಬಿ. ಡಿ. ಗೋಪಾಲಕೃಷ್ಣ (ಸಹಕಾರ್ಯದರ್ಶಿ), ಬಿ. ಆರ್. ನಾಗಭೂಷಣ (ಖಜಾಂಚಿ), ಜಗನ್ನಾಥ ಹೆಬ್ಬಾರ್ ಮತ್ತು ಜಿ. ಆರ್. ಗುರುಮೂರ್ತಿ ಹಾಗೂ ಬ್ಯಾಂಕ್ ಮ್ಯಾನೇಜರ್ / ಗ್ರಾ. ಅ. ಅಧಿಕಾರಿ (ನಿರ್ದೇಶಕರುಗಳು).

ಹೊಲಿಗೆ ಯಂತ್ರ ನೀಡಿಕೆ

ಶೃಂಗೇರಿ : ಇಲ್ಲಿನ ವನಿತಾ ಸೇವಾ ಸಮಾಜ ಮತ್ತು ನವೋದಯ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಜು. 20ರಂದು 28 ಜನರಿಗೆ ಹೊಲಿಗೆ ಯಂತ್ರಗಳನ್ನು ಕೆ. ವಿ. ರಾಮಪ್ಪಯ್ಯ ಅವರ ಅಧ್ಯಕ್ಷತೆಯಲ್ಲಿ ಯು. ಕೆ. ಶಾಮಣ್ಣ ವಿತರಣೆ ಮಾಡಿದರು. ನೂತನ ಮಂಡಲ ಪ್ರಧಾನ ಎಚ್. ಆರ್. ಕೃಷ್ಣಮೂರ್ತಿ ಮುಖ್ಯ ಅತಿಥಿಯಾಗಿದ್ದರು.

ಮಹಿಳೆಯರಿಗೆ ನೆರವಾಗಲು ರೂಪಿಸಿದ ಈ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳುವಂತೆ ಕರೆ ನೀಡಿದ ಭಾಷಣಕಾರರು, ನವೋದಯ ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಡಾ|| ಎಲ್. ಎಂ. ಭಟ್‌ರವರ ಸಮಾಜ ಸೇವೆಯನ್ನು ಶ್ಲಾಘಿಸಿದರು.

ಅಕ್ಕಿ ಉತ್ಪಾದನಾ ರಿಯಾಯಿತಿಗಳು

ಶೃಂಗೇರಿ : ಅಕ್ಕಿ ಉತ್ಪಾದನಾ ವಿಶೇಷ ಯೋಜನೆಯಲ್ಲಿ ರೈತರಿಗೆ ಈ ಸಾಲಿನಲ್ಲಿ ಬಿತ್ತನೆ ಬೀಜಕ್ಕೆ ಕ್ವಿಂಟಾಲಿಗೆ 200 ರೂ: ಸಹಾಯ ಧನ, ಸತುವಿನ ಸಲ್ಫೇಟ್‌ಗೆ ಶೇ. 50 ರಿಯಾಯಿತಿ (ಹೆಕ್ಟೇರಿಗೆ 100 ರೂ.ಗೆ ಮೀರದಂತೆ), ಕಳೆನಾಶಕಕ್ಕೆ ಶೇ. 50 ರಿಯಾಯಿತಿ (ಹೆ.ಗೆ 250 ರೂ.ಗೆ ಮೀರದಂತೆ), ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ. 50 ರಿಯಾಯಿತಿ (ಹೆ.ಗೆ 100 ರೂ. ಗರಿಷ್ಠ), ಸಿಂಪರಣಾ ಯಂತ್ರಕ್ಕೆ ಶೇ. 50 ರ ರಿಯಾಯಿತಿ (ಗರಿಷ್ಠ 500 ರೂ.)—ಈ ಸವಲತ್ತುಗಳನ್ನು ನೀಡಲಾಗುತ್ತಿದೆ. ಕೃಷಿ ಸಹಾಯಕರನ್ನು ಅಥವಾ ಮೇಲಧಿಕಾರಿಗಳನ್ನು ಸಂಪರ್ಕಿಸಬಹುದು

ಕೊಪ್ಪದ ಅಗತ್ಯಗಳ ಬಗ್ಗೆ ಸಿಪಿಐ ಒತ್ತಾಯ

ಕೊಪ್ಪ : ಭಾರತ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿ ಸಭೆಯು ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜುಲೈ 11ರಂದು ನಡೆಯಿತು. ಸಭೆಯಲ್ಲಿ ಪಕ್ಷದ ನೂತನ ಜಿಲ್ಲಾ ಕಾರ್ಯದರ್ಶಿ ಪಿ. ವಿ. ಲೋಕೇಶ್ ಹಾಗೂ ಪಕ್ಷದ ಮುಖಂಡ ಬಿ. ಕೆ. ಸುಂದರೇಶ್ ಭಾಗವಹಿಸಿದ್ದರು. ಸಭೆಯಲ್ಲಿ ತಾಲ್ಲೂಕಿನ ಜನರ ಅಗತ್ಯಗಳನ್ನು ಗುರುತಿಸಿ, ಈ ಕೆಳಗಿನ ಅವಶ್ಯಕತೆಗಳನ್ನು ಪೂರೈಸುವತ್ತ ಸಂಬಂಧಪಟ್ಟವರು ಗಮನಹರಿಸುವಂತೆ ಒತ್ತಾಯಿಸಲಾಯಿತು.

1. ಕೊಪ್ಪಕ್ಕೆ ಕಂದಾಯ ಉಪ ವಿಭಾಗಾಧಿಕಾರಿಗಳ ಕಛೇರಿ, 2. ಸಹಾಯಕ ಸಾರಿಗೆ ಅಧಿಕಾರಿಗಳ ಕಛೇರಿ, 3. ಪ್ರಥಮ ದರ್ಜೆ ನ್ಯಾಯಾಲಯ, 4. ತಾಂತ್ರಿಕ ಕಾಲೇಜು (ಐಟಿಐ ಅಥವಾ ಪಾಲಿಟೆಕ್ನಿಕ್), 5. ಕುಡಿವ ನೀರು ಶುದ್ಧೀಕರಣ ಯಂತ್ರಾಗಾರ, 6. ವ್ಯವಸ್ಥಿತ ಬಸ್ ನಿಲ್ದಾಣ, ಹಾಗೂ 7. ಕೈಗಾರಿಕಾ ವಸಾಹತು.

ನೆಮ್ಮಾರಿನ ಹಂದಿ ಸಾಕಣೆ ದ್ವಾರಾ ಘಟಕದಲ್ಲಿ ದುರುಪಯೋಗವಾಗಿರುವ ಹಣವನ್ನು ಬ್ಯಾಂಕ್ ಮ್ಯಾನೇಜರಿಂದ ವಸೂಲು ಮಾಡಲು ಜಿ.ಪ.ಸಮಿತಿ ನಿರ್ಧಾರ

ಶೃಂಗೇರಿ : ಇಲ್ಲಿಗೆ ಸಮೀಪದ ನೆಮ್ಮಾರಿನಲ್ಲಿ ಹರಿಜನ ಫಲಾನುಭವಿಗಳಿಗಾಗಿ ಆರಂಭಿಸಿದ್ದ ಸುಧಾರಿತ ತಳಿ ಹಂದಿ ಸಾಕಣೆಯ ದ್ವಾರಾ ಘಟಕದಲ್ಲಿ ದುರುಪಯೋಗವಾಗಿರುವ ಹಣವನ್ನು ಅಲ್ಲಿ ಆಗ ಚಿ. ಕೊ. ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಆಗಿದ್ದ ಅಶೋಕ್ ಕುಮಾರ್ ಅವರಿಂದ ವಸೂಲು ಮಾಡಲು ಜಿಲ್ಲಾ ಪರಿಷತ್ ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸ್ಥಾಯಿ ಸಮಿತಿ ನಿರ್ಣಯ ಕೈಗೊಂಡಿದೆ.

ಉತ್ತಮವಾದ ಏಪರ್ಡಿನೊಂದಿಗೆ ಆರಂಭಿಸಲ್ಪಟ್ಟು, ಚೆನ್ನಾಗಿ ನಡೆಯುತ್ತಿದ್ದ ಈ ಘಟಕದ ಹಣಕಾಸಿನ ವ್ಯವಹಾರದಲ್ಲಿ ಫಲಾನುಭವಿಗಳಿಗೆ ತಿಳಿಯದಂತೆ ಬ್ಯಾಂಕ್ ಮ್ಯಾನೇಜರ್ ಹಸ್ತಕ್ಷೇಪ ನಡೆಸಿ, ಸುಮಾರು 50 ಸಾವಿರ ರೂ.ಗಳಷ್ಟು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು ಈಗ್ಗೆ 2 ವರ್ಷದ ಹಿಂದೆಯೇ ತನಿಖೆಯಿಂದ ಸ್ಥಿರಪಟ್ಟಿದ್ದನ್ನೂ, ಅದೇ ಕಾರಣದಿಂದಾಗಿ ಘಟಕ ಮುಚ್ಚಿ ಹೋದುದನ್ನೂ ಇಲ್ಲಿ ಸ್ಮರಿಸಬಹುದು.

ಇದಲ್ಲದೆ, ಬ್ಯಾಂಕಿನವರು ಈ ಹಿಂದೆ ನಿಗದಿಪಡಿಸಿದ್ದ ಬಡ್ಡಿ ದರವನ್ನು ಪೂರ್ಣವಾಗಿ ಮನ್ನಾ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲೂ ಸ್ಥಾಯಿ ಸಮಿತಿ ತೀರ್ಮಾನಿಸಿದೆ.

ಈ ಯೋಜನೆಯ ಬಾಬ್ತು ವಿಮೆಯ ಹಣವನ್ನು ಬ್ಯಾಂಕಿನವರು ಭರಿಸುವಂತೆಯೂ, ಉಳಿದ ಹಣವನ್ನು ಫಲಾನುಭವಿಗಳಿಂದ ವಸೂಲು ಮಾಡುವಂತೆಯೂ ಸಮಿತಿ ತೀರ್ಮಾನಿಸಿದ್ದು, ಈ ತೀರ್ಮಾನಗಳ ಮೇಲೆ 1 ತಿಂಗಳೊಳಗೆ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕೆಂದೂ ಸೂಚಿಸಿದೆ.

ಜಿ. ಪ ಯೋಚಿಸಲಿ

ಅಂತೂ ಅಂತಿಮವಾಗಿ ಈ ನತದೃಷ್ಟ ಫಲಾನುಭವಿಗಳ ಪಾಲಿಗೆ ಈ ಯೋಜನೆಯಿಂದಾದ 'ಪ್ರಯೋಜನ' ವೆಂದರೆ ಈ ರೀತಿ ವಸೂಲಿಗೆ ಒಳಗಾಗುವುದು ಮಾತ್ರವೇ ಎಂದಂತಾಯಿತು. ಆದರೆ, ಈ ಘಟಕದ ಲಾಭ ಕೈಗೆಟುಕಬೇಕೆಂಬಷ್ಟರಲ್ಲೇ ಮುಚ್ಚಿ ಹೋಗಿದ್ದರಿಂದ ಹಳೆಯ ಸಾಲ-ಬಡ್ಡಿಗಳನ್ನೆಲ್ಲ ಕೈ ಬಿಟ್ಟು, ಘಟಕವನ್ನೇ ಪುನಶ್ಚೇತನಗೊಳಿಸಿಕೊಡಬೇಕೆಂಬುದು 3 ವರ್ಷಗಳಿಂದಲೂ ಫಲಾನುಭವಿಗಳ ಬೇಡಿಕೆಯಾಗಿತ್ತು. ಜಿ. ಪ. ಅಧ್ಯಕ್ಷರುಗಳಿಗೂ, ಬಂದ-ಹೋದ ಮಂತ್ರಿ-ಶಾಸಕರೆಲ್ಲರಿಗೂ ಅವರ ಅಹವಾಲು ಇದೊಂದೇ ಆಗಿತ್ತು. ಹಾಲಿ ಜಿ. ಪ. ಅಧ್ಯಕ್ಷ ರಾಮದಾಸ್ ಅವರ ಅಪೇಕ್ಷೆಯೂ ಇದೇ ಆಗಿತ್ತು.

ಇಷ್ಟಾಗಿಯೂ, ಸ್ಥಾಯಿ ಸಮಿತಿ ಘಟಕದ ಪುನಶ್ಚೇತನದ ಬಗ್ಗೆ ತೀರ್ಮಾನ ಕೈಗೊಳ್ಳುವ ಬದಲು, ಫಲಾನುಭವಿಗಳಾಗಲು ಒಪ್ಪಿ ಕ್ರಮ ಪಟ್ಟು ದುಡಿದುದಕ್ಕೆ ಅವರ ತಲೆ ದಂಡವನ್ನೇ ಕೇಳುವಂಥ "ಅಸಲು ವಸೂಲಿಯ" ನಿರ್ಧಾರ ಕೈಗೊಂಡಿರುವುದು ಶೋಚನೀಯ. ಜಿಲ್ಲಾ ಪರಿಷತ್ತು ಈಗಲಾದರೂ ಈ ತೀರ್ಮಾನವನ್ನು ಬದಲಿಸಿ, ಈ ನತದೃಷ್ಟರನ್ನು ವಿನಾಕಾರಣ ಸಾಲಗಾರರನ್ನಾಗಿ ಪರಿಗಣಿಸಿ-ಹಿಂಸಿಸುವ ಬದಲು, ಅದೇ ಘಟಕವನ್ನು ಆಗಿನಷ್ಟೇ ಅಚ್ಚುಕಟ್ಟಾಗಿ ಪುನಶ್ಚೇತನಗೊಳಿಸಿಕೊಡಲು ನಿರ್ಣಯಿಸುವುದು ಅದಕ್ಕೆ ಸ್ವಲ್ಪವಾದರೂ ಗೌರವ ತರುವ ಸಂಗತಿ.

ಆಸಕ್ತರಿಗೆ ಉಚಿತ ಸಸಿ ನೀಡಿಕೆ ಜು. 31ರಂದು

ಕೊಪ್ಪ : ಇಲ್ಲಿನ ಚಿಟ್ಟೆಮಕ್ಕಿ ದೇವಸ್ಥಾನದ ಹಿಂಭಾಗದ ಪವಿತ್ರ ವನದಲ್ಲಿ ಜು. 31ನೇ ಮಂಗಳವಾರ ಬೆಳಗ್ಗೆ 11 ಗಂಟೆಗೆ ರೈತರು ಮತ್ತು ಸಾರ್ವಜನಿಕರಿಗೆ ತಲಾ 10 ರಿಂದ 25 ಗಿಡಗಳವರೆಗೆ ವಿವಿಧ ಜಾತಿಯ ಸಸಿಗಳನ್ನು ಅರಣ್ಯ ಇಲಾಖೆ ಉಚಿತವಾಗಿ ನೀಡುವುದು. ಆಸಕ್ತರು ಪ್ರಯೋಜನ ಪಡೆದುಕೊಳ್ಳಬಹುದು.

ಮಣ್ಣಿನ ಮಕ್ಕಳ ಕಸುವಿನ, ರಂಜನೀಯ ಕೆಸರು ಗದ್ದೆ ಓಟ - ಹಗ್ಗ ಜಗ್ಗಾಟ

ಬಿಳಾಲುಕೊಪ್ಪ : ಇಲ್ಲಿನ ಮೇರುತಿ ಜೇಸಿ ಜು. 8ರಂದು 3 ಜಿಲ್ಲೆಗಳ ಮಟ್ಟದಲ್ಲಿ ಏರ್ಪಡಿಸಿದ್ದ ಮಣ್ಣಿನ ಮಕ್ಕಳ ಕಸುವಿನ ಕೆಸರು ಗದ್ದೆ ಓಟ ಮತ್ತು ಹಗ್ಗ ಜಗ್ಗಾಟ ಸ್ಪರ್ಧೆಗಳು ಸುತ್ತಮುತ್ತಲ ಗ್ರಾಮಗಳಿಂದ ಕಿಕ್ಕಿರಿದು ನೆರೆದಿದ್ದ ಸುಮಾರು 1500 ಮಂದಿ ಕ್ರೀಡಾಭಿಮಾನಿಗಳನ್ನು ಅವಿಸ್ಮರಣೀಯವಾಗಿ ರಂಜಿಸಿದವು.

ಜೇಸಿ ಅಧ್ಯಕ್ಷೆ ಸುಧಾ ವಿ. ಮೂರ್ತಿ, ಯವರ ಅಧ್ಯಕ್ಷತೆಯಲ್ಲಿ ಬಿ. ಕೆ. ವೆಂಕಪ್ಪಯ್ಯ ಬಹುಮಾನ ವಿತರಿಸಿದರು: ಬಿ ವಿ. ನರಸಪ್ಪಯ್ಯ ಮುಖ್ಯ ತೀರ್ಪುಗಾರರಾಗಿದ್ದರು. ಎ. ಸಿ. ಶಂಕರ್ ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಕ ಎ. ಎಲ್. ನಾಗಭೂಷಣ್ ವಂದಿಸಿದರು.

ಫಲಿತಾಂಶಗಳು

ಕೆಸರುಗದ್ದೆ ಓಟ–ಪುರುಷರು : ಜಕ್ಕಣಿಕೆ ವೆಂಕಟೇಶ್, ಬಾಳೆಹೊನ್ನೂರು–1, ಬೆಮ್ಮನೆ ದೇವೇಂದ್ರ, ನ. ರಾ ಪುರ–2, ಎ. ಎಂ. ಜನಾರ್ದನ, ಮಲ್ನಾಡ್ ಕ್ಲಬ್, ಆಲ್ದೂರು–3, ಬಿ. ಎಂ. ಸುರೇಂದ್ರ ಗೌಡ, ಕುಡುಮಲ್ಲಿಗೆ-4.

ಮಹಿಳೆಯರು : ಜೆ. ಬಿ. ಅನ್ನಪೂರ್ಣ, ಜಕ್ಕಣಿಕೆ-1 ಅನಿತಾಪತ್ರಾವೊ, ಬಸ್ರಿಕಟ್ಟೆ ಪ್ರೌಢಶಾಲೆ –2, ವೀರಾ ರಾಡ್ರಿಗಸ್, ಬಿಳಾಲುಕೊಪ್ಪ–3, ಡಿ. ಉಮಾದೇವಿ, ಕೆರೆಹಳ್ಳ–4

ಪುರುಷರ ಹಗ್ಗ ಜಗ್ಗಾಟ : ಬೆಮ್ಮನೆ ದೇವೇಂದ್ರ ಮತ್ತು ತಂಡ–1 ಅತ್ತಿಕುಡಿಗೆ ಚಂದ್ರಶೇಖರ ಉಡುಪ ಮತ್ತು ತಂಡ–2.

ಕೊಪ್ಪ ತಾ॥ ಕಂದಾಯ ಇಲಾಖೆ ನೌಕರರ ಸಂಘ

ಕೊಪ್ಪ : ತಾ॥ ಕಂದಾಯ ಇಲಾಖೆ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ರೆವಿನ್ಯೂ ಇನ್‌ಸ್ಪೆಕ್ಟರ್ ಜಿ. ಟಿ. ಹಾಲಪ್ಪಗೌಡ ಆಯ್ಕೆಯಾಗಿದ್ದಾರೆ. ಇತರ ಪದಾಧಿಕಾರಿಗಳು : ಎಂ. ಪಿ. ಚಕ್ರಪಾಣಿ (ಉಪಾಧ್ಯಕ್ಷ), ಎಚ್. ಎಂ. ರಮೇಶ್ (ಕಾರ್ಯದರ್ಶಿ), ಎ. ಪಿ. ಸೀತಾರಾಂ (ಸಂಘಟನಾ ಕಾರ್ಯದರ್ಶಿ), ಸುಬ್ಬೇಗೌಡ (ಖಜಾಂಚಿ) ಹಾಗೂ 10 ಜನ ನಿರ್ದೇಶಕರು.

ಅಡಿಕೆ ಧಾರಣೆ

ಶಿವಮೊಗ್ಗ : 26–7–1990

ಸರಕು : 4269–4723

ಬೆಟ್ಟೆ : 3460–3929

ಗೊರಬಲು : 2425–2639

ಸಾಗರ 26–7–1990

ಇಡಿ : 3569–3761

ಆಪಿ : 4389–4569

ಚಾಲಿ : 3286–3489

ಸಿಪ್ಪೆ ಗೋಟು : 1025–1816

ಉಚಿತ ಪಠ್ಯಪುಸ್ತಕಗಳ ವಿತರಣೆ

ನಾರ್ವೆ : ನರಸೀಪುರ ಮಂಡಲ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಶಾಲೆಗಳ 1 ರಿಂದ 10ನೇ ತರಗತಿಯ ಹರಿಜನ–ಗಿರಿಜನ ವಿದ್ಯಾರ್ಥಿಗಳಿಗೆ ಮಂಡಲ ಪಂಚಾಯ್ತಿಯ ಶೇ. 20 ರ ನಿಧಿಯಿಂದ ಉಚಿತವಾಗಿ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು.

ಜಿಲ್ಲಾ ಪರಿಷತ್ ಅಧ್ಯಕ್ಷ ಬಿ ಎಲ್. ರಾಮದಾಸ್ ಜು 9 ರಂದು ಮಂಡಲ ಪಂಚಾಯ್ತಿಗೆ ಭೇಟಿ ನೀಡಿದ್ದಾಗ ಅವರಿಂದ ಪಠ್ಯ ಪುಸ್ತಕಗಳ ವಿತರಣೆ ನೆರವೇರಿಸಲಾಯಿತು. ಮಂಡಲ ಪಂಚಾಯ್ತಿ ಪ್ರಧಾನರಾದ ಕಾಡಪ್ಪ ಗೌಡರು, ಉಪ ಪ್ರಧಾನ ಎಂ. ಆರ್. ಜಯಪ್ರಕಾಶ್, ಎಲ್ಲಾ ಸದಸ್ಯರು, ಜಿಲ್ಲಾ ಪರಿಷತ್ ಸದಸ್ಯರುಗಳಾದ ಸುಮಿತ್ರಮ್ಮ, ಬಿ. ಜಿ. ಚಿದಂಬರ್ ಮತ್ತು ಮಾಸ್ತಿಯವರು ಹಾಗೂ ಕೊಪ್ಪ ಬಿ.ಡಿ ಒ. ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು.

ಜಯಪುರದ ಮಲೆನಾಡು ಸ್ಪೋರ್ಟ್ಸ್ ಕ್ಲಬ್‌ನಿಂದ ಪ್ರತಿಭಾವಂತರಿಗೆ ಸನ್ಮಾನ

ಜಯಪುರ : ಇಲ್ಲಿನ ಮಲೆನಾಡು ಸ್ಪೋರ್ಟ್ಸ್ ಕ್ಲಬ್ ಕಳೆದ ವರ್ಷದಂತೆ ಈ ವರ್ಷವೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿತು. ಮಂಡಲ ಪ್ರಧಾನ ಎ. ಸಿ. ವಜ್ರಪ್ಪ ಸಮಾರಂಭದ ಅಧ್ಯಕ್ಷರಾಗಿದ್ದರು.

ಸ್ಥಳೀಯ ಪ್ರೌಢ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕೆ. ರಾಘವೇಂದ್ರ, ಎಸ್. ಸುನಂದ, ಇಂಜನಿಯರಿಂಗ್‌ಗೆ ಪ್ರವೇಶ ಪಡೆದಿರುವ ಮಕ್ಸೂದ್ ಮೊಯ್ದೀನ್ ಮತ್ತು ನವೋದಯ ಶಾಲೆಗೆ ಪ್ರವೇಶ ಪಡೆದ ಕು। ಪ್ರೀತಿ ಇವರುಗಳನ್ನು ಸನ್ಮಾನಿಸಲಾಯಿತು.

ಕ್ಲಬ್ ಅಧ್ಯಕ್ಷ ಕೆ. ಜಿ. ಪಿ. ಶಾಸ್ತ್ರಿ ಇವರುಗಳನ್ನು ಪರಿಚಯಿಸಿದರು. ಪ್ರೌಢ ಶಾಲೆಯ ಅಧ್ಯಾಪಕ ಅಶ್ವತ್ಥ ನಾರಾಯಣ ಮತ್ತು ಹಿ ಪ್ರಾ. ಶಾಲೆ ಮುಖ್ಯೋಪಾಧ್ಯಾಯರಾದ ಚಿನ್ನಪ್ಪ ಮುಖ್ಯ ಅತಿಥಿಗಳಾಗಿದ್ದರು. ಕ್ಲಬ್ ಉಪಾಧ್ಯಕ್ಷ ವಿಜಯ ಜಾದೂಗಾರ್ ವಂದಿಸಿದರು.

(ವರದಿ : ಶಂ. ನ. ಶೇಷಗಿರಿ.)

ಶೃಂಗೇರಿಯಲ್ಲಿ ಇಬ್ಬರ ಆತ್ಮಹತ್ಯೆ

ಶೃಂಗೇರಿ : ಕೃಷ್ಣ ಎಂಬವರ ಹೆಂಡತಿ ವಿಶಾಲ ಎಂಬವರು ಜು 16ರಂದು ತಮ್ಮ 8 ತಿಂಗಳ ಮಗುವನ್ನು ಕುತ್ತಿಗೆಗೆ ಟವೆಲ್ ಬಿಗಿದು ಸಾಯಿಸಿ, ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೂ 3 ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಈಕೆಗೆ ಸ್ವಲ್ಪ ಮಂದ ಕಿವಿಯಲ್ಲದೆ, ಮಾನಸಿಕ ಅಸ್ವಸ್ಥತೆಯೂ ಇತ್ತೆನ್ನಲಾಗಿದೆ

ತೆಕ್ಕೂರಿಗೆ ಸಮೀಪದ ಕೊಡತಲು ಹೊಸಂಬಳಿಯ ದಿ॥ ಹಾಲಪ್ಪಗೌಡರ ಮಗ ಕೆ.ಎಚ್. ಹರೀಶ (22) ಜು. 16ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ತಂದೆ ತಾಯಿಗಳಿಲ್ಲದ ಹತಾಶೆಯೇ ಮಾನಸಿಕ ಅಸ್ವಸ್ಥತೆಯಾಗಿ, ಮಾತ್ರೆ ಸೇವಿಸುತ್ತಿದ್ದನೆನ್ನಲಾಗಿದೆ ಈತ ಏಕೈಕ ತಂಗಿಯನ್ನು ಅಗಲಿದ್ದಾನೆ

ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳ ಸಭೆ

ಉತ್ತಮೇಶ್ವರ : ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಕುರಿತು, ಜಿಲ್ಲಾ ಮಟ್ಟದಲ್ಲಿ ರಚಿಸಲಾದ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡ ಸಮಾಲೋಚನಾ ಸಮಿತಿ ಸಭೆ, ಜಿಲ್ಲಾ ಪರಿಷತ್ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜು. 13 ರಂದು ನಡೆಯಿತು ಈ ಸಮಿತಿಯ ಘಟಕಗಳಲ್ಲಿ ಇಲ್ಲಿನ 'ಸ್ವಯಂ ಸೇವಾ ಕೇಂದ್ರ'ವೂ ಒಂದಾಗಿದ್ದು, ಜಿಲ್ಲೆಯ ಇತರ ನಾಲ್ಕು ಸ್ವಯಂ ಸೇವಾ ಸಂಸ್ಥೆಗಳು ಸಭೆಯಲ್ಲಿ ಪಾಲ್ಗೊಂಡಿದ್ದವು. ಅಲ್ಲದೆ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಇತರ ಅಧಿಕಾರಿಗಳೂ ಪಾಲ್ಗೊಂಡಿದ್ದರು.

ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕ್ರಮಗಳು, ಇವು ಈವರೆಗೆ ಮಾಡಿರುವ ಮತ್ತು ಮಾಡಬಹುದಾಗಿರುವ ಕಾರ್ಯಗಳ ಬಗ್ಗೆ ವಿಸ್ತೃತವಾದ ಚರ್ಚೆ ನಡೆಯಿತು 'ಸ್ವಯಂ ಸೇವಾ ಕೇಂದ್ರ'ದ ಕಾರ್ಯದರ್ಶಿ ಯು. ಎಂ. ಗಂಗಾಧರ್ ತಮ್ಮ ಸಂಸ್ಥೆಯ ಕಾರ್ಯವಿಧಾನ, ಈ ವರೆಗೆ ಮಾಡಿದ ಕಾರ್ಯಗಳು ಹಾಗೂ ಹಮ್ಮಿಕೊಂಡಿರುವ ಯೋಜನೆಗಳ ಬಗೆಗೆ ವಿವರ ನೀಡಿದರು.

ಮುಂದೆ ಈ ಸಭೆಯನ್ನು ಮೂರು ತಿಂಗಳಿಗೊಮ್ಮೆ ಕರೆಯುವುದೆಂದು ತೀರ್ಮಾನವಾಯಿತು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್. ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ